## ಕವಿ –ಕಾವ್ಯ ವಿಚಾರ

ಕವಿಚರಿತೆಯ ಮೂರು ಸಂಪುಟಗಳ ಅವಲೋಕನದಿಂದ ಬೊಮ್ಮಯ್ಯ, ಬೊಮ್ಮರಸ, ಬ್ರಹದೇವ, ಬ್ರಹ್ಮಶಿವ ಎಂಬ ಹೆಸರಿನ ಹಲವು ಕವಿಗಳು ಕಂಡುಬರುತ್ತರೆ. ಅವರಲ್ಲಿ ಸೌಂದರಪುರಾಣಕಾರ ಬೊಮ್ಮರಸ ಸು. ೧೪೫೦ ರಲ್ಲಿವನು. ಚತುರಾಸ್ಯ ಮತ್ತು ರೇವಣಸಿದ್ದೇಶ್ವರ ಪುರಾಣ ವನ್ನು ಬರೆದಿದಾರೆ. ಸು .೧೪೮೫ ರಲ್ಲಿದ್ದಿರಬಹುದಾದ ತೆರಕಣಾಂಬಿ ಭೊಮ್ಮರಸನು ಸನತ್ಕುಮಾರ ಷಟದಿ ಮತ್ತು ಜೀವಂಧರ ಸಾಂಗತ್ಯವನ್ನು ಬರೆದಿದಾನೆ.

ತೆರಕಣಾಂಬಿ ಬೊಮ್ಮರಸನ ತಂದಯ ಹೆಸರು ಬೊಮ್ಮರಸನೆಂದು ಸನತ್ಕುಮಾರ ಚರಿತೆಯ 'ಬೊಮ್ಮರಸುಪಾಧ ಸುಕುಮಾರ ಬೊಮ್ಮರಸ ವಿರಚಿತ ಸನತ್ಕುಮಾರ ಪ್ರಬಂಧ'ವೆಂಬ ಸಮಾಪ್ತಿ ಗದ್ಯದಿಂದ ತಿಳಿದು ಬರುತ್ತದೆ. ತೆರಕಣಂಬಿ ಬೊಮ್ಮರಸನ ತಂದೆ ಬೊಮ್ಮರಸನು ಒಳೆಯ ವಿದ್ವಾಂಸನಿರಬೇಕು. ಅಲ್ಲದೆ. ಬೊಮ್ಮರಸನ ಮನೆತನವೇ ವಂಶಪರಂಪರೆಯಿಂದ ವಿದ್ವಾಂಸರಿಂದ ಕೂಡಿದುದು, ಸನತ್ಕುಮಾರ ಚರಿತೆ ಮತ್ತು ಜೀವಂಧರ ಸಾಂಗತ್ಯಗಳಲ್ಲಿ ಅವನೇ ಹೇಳುವಂತೆ–

" ಮಂಡಲೇಶ್ವರ ಪೌಢರಾಯರನ
ಕಂಡು ತತ್ಸಭೆಯಲ್ಲಿ ರಂಜಿಪ
ತಂಡ ತಂಡದ ವಾದಿ ವಿದ್ವಾನುಉಗಳ ಮದದುಳಿದು

ಕೊಂಡು ಜಯಪತ್ರವನು ಭುವಿಗೆ ಪ್ರ

ಚಂಡ ತಾರ್ಕಿಕ ರತ ಸದ್ಗುಣ

ಮಂಡನಾಂಗನು ನೇಮಿಚಂದ್ರಗೆ ಶಿರದ ಮಗಿಪೆನು

......... ನೇಮಿಚಂದ್ರಾ

ರ್ಯನ ತನಯಸುತಸೂನು ಪೇಳಿದ

ನೆನಲೊಲ್ಲಿದು ಲಾಲಿಸದರಾರೀ ಭುವನ ಮಧ್ಯದಲ್ಲಿ

(ಸನುತ್ಕುಮಾರ ಚರಿತೆ ೧–೧೭, ೧೮)

" ಪ್ರೌಢರಾಯರ ಮಚಿಸಿ ಜಯಪತ್ರವ

ಗಾಡಿಯಿಂ ತಂದಿಳೆಯೊಳಗೆ

ರೂಢಿವಡೆದ ನೇಮಿಚಂದ್ರನ ಕುಲದೀಪ

ಮಾಡಿದ ಕೃತಿ ರಾಜಿಸದೆ'

(ಜೀವಂಧರ ಚರಿತೆ ೨೦–೩೯)

ಈ ಮೇಲಿನ ಉದ್ದರಣದಿಂದ ಬೊಮ್ಮರಸನ ಮುತ್ತಾತನು ಪೌಢರಾಯನ ಆಸ್ಥಾ ನದಲ್ಲಿ ತಾರ್ಕಿಕರನ್ನು ಸೋಲಿಸಿದಂತೆ ತಿಳಿದು ಬರುತ್ತದೆ. ವಿದ್ವಾಂಸರ ಅಭಿ ಪ್ರಾಯದಂತೆ ಈ ಪೌಢರಾಯನು ಎರಡನೆಯ ದ್ವೇವರಾಯ.

ಎರಡನೆಯ ದೇವರಾಯನು ವಿಜಯನಗರದ ಅರಸುಗಳಲ್ಲಿ ಪ್ರಸಿದ್ಧನಾದನು. ಅವನ ಕಾಲವು ವಿಜಯನಗರ ಆಡಳಿತದಲ್ಲಿ ಹೆಸರಾದುದು. ಆತನ ಆಸ್ಥಾನವುಜೈನ, ವೃಷ್ಣ ವ, ಶ್ರೀವೃಷವ ಮತ್ತು ವೀರಶೈವ ವಿದ್ವಾಂಸರು ಒಂದೆಡೆ ಕೂಡುವ ಸ್ಥಳವಾಗಿ ದ್ದಿತ್ತು. ನೇಮಿಚಂದ್ರನು ವಾದಿಗಳನ್ನು ಸೋಲಿಸಿದತಂದ ಇನೂಂದು ಪ್ರಸಂಗ ಎರಡನೆಯ ದೇವರಾಯನ ಆಸ್ಥಾ ನದಲ್ಲಿ

ನಡದಿದೆ. ಅದು ಆ ಕಾಲದ ಶ್ರೀವೈಷ್ಣವ ವಿದ್ವಾಂಸನಾದ ಮುಕುಂದರೆಡ್ಡಿ ಅಥವಾ ಕಂತಾಳ ಅಪ್ಪಲಾಚಾರ್ಯ ಎಂಬುದುವನು ವಾದದಲ್ಲಿ ವೀರಶೈವರಾದ ಜಕ್ಕಣ ಮತ್ತು ಚಾಮರಸರಿಂದ ಸೋಲಿಸಲಟ್ಟುದು.

ಎರಡನಯ ದೇವರಾಯ ತಮ್ಮ ವೀರ ಪಾರ್ವತಿರಾಯನು ತೆರಕಾಣಂಬೇಯ ರಾಜ್ಯವನ್ನು ಆಳುತ್ತಿದನು. ಆತನು ಹಂದಿಯ ಬೇಟಯಾಡಿದುದನ್ನು ಕುರಿತು ಕ್ರಿ. ಶ. ೧೪೨೫ ರ ಒಂದು ಶಾಸನವಿದೆ.ಸನತ್ಕುಮಾರ ಚರಿತೆ ಮತ್ತು ಜೀವಂಧರ

**1. The jaina scholar Nemichandra is said to said to have defeated all opponents at tha court of devaraya II and obtained acertificate of victory.(Dr. S.srikanta saatry, vijayanagnra sex centenary commerati0n volume,pege 310)**

**Terakanambi Bommmarasa, who states tha his grandfathjer Nemichandra who fame as a disputant at the court of Devaraya II (mys0re gazetteer II-iii, page 1663, 64,65).**

**2. His (Devaryaya II) court was the meeting place of jaina, vaishnava, srivaishnava and virashaivascholaes.**
**Ibid-309**

**3. The srivaishnava scholars of the time were Mukundareddi or kantala appalacharya said to have been**

**defeated in Dispute by the virasaivas, Jakkanna and chamarasa. Idib-309**

**4.** ಸ್ವಸ್ತಿ ಶ್ರೀ ವಿಜಯ ಶಾಲಿವಾಹನ ಶಕವರ್ಷ ೧೩೪೭ಸಂದ ವರ್ತಮಾನ ವಿಶ್ವಾವಸು ಸಂವತ್ಸರದ ಜೇಷ್ಠ ಬ. ೧೧ ಮಂಲು ಶ್ರೀಮಂನ್ಮ ಹಾರಾಜಾಧಿರಾಜ ಪರಮೇಶ್ವರ ಶ್ರೀಮಂನಹಾಮಂಡಳೇಶ್ವರ ಶ್ರೀ ವೀರ ಪಾರ್ವತಿರಾಯೊಡೆಯರು ತಾವು ಆಳುವ ತೆರಕಣಂಭೆಯ ರಾಜ್ಯದ ತಿರುಮಲೆ ನಾಥ ದೇವರ ಬೆಟ್ಟದ ಮೂಡದ ಹಳ್ಳದ ಬೇಟೆಯ ಬೈಲಿನಲ್ಲಿ ತಾವು ಆದ ಪರ್ವತನಾಥನೆಂಬ ಕುದುರೆಯ ಮೇಲೆ ಇದ್ದು ಹಂದಿಯಂ ಕಂಡು ಆಂಜಲು ಹಳ್ಳವ ದಾಂಟಿ **X X** ರಳಗೆ **XX** ಹುಲಿಹರ ಹಾಯಣ್ಣನ ಮಗ ಗರಿಯಣ್ಣ ಗಳು ನಿಲ್ಲಿಸಿದ ಜಯಸಂಭದ ಕುರುಹಿನ ಕಲ್ಲುಮಂಗಳ ಮಹಾ ಶ್ರೀ॥

(ಚಾಮರಾಜನಹರ೯;೧೪೨೫ ಅ .ಈ)

ಸಾಂಗತ್ಯದ ಉದ್ಧರಣಗಳ ಪ್ರಕಾರ ಮಡಲೇಶ್ವರ ಪ್ರೌಢರಾಯನು ಇಮ್ಮಡಿ ದೇವರಾಯನೋ ವೀರ ಪಾರ್ವತಿರಾಯನೋ ಅರ್ಥವಾಗದು. ಘನವಿದ್ವಾಂಸನೂ ತಾರ್ಕಿಕನೂ ಆದ ನೇಮಿಚಂದ್ರನು ಮಂಡಲೇಶ್ವರ ವೀರ ಪಾರ್ವತಿರಾಯನ ಮೂಲಕ ಅವರ ಅಣ್ಣನ ಆಸ್ಥಾನಕ್ಕೆ ಹೋಗಿರುವ ಸಾಧ್ಯಾತೆಯೂ ಬಹಳ. ಅಂತು ಇವರಲ್ಲಿ ಯಾರ ಆಸ್ಥಾನದಲ್ಲಿಯೆ ಇರಲಿ ನೇಮಿಚಂದ್ರನ ಕಾಲ ಸು. ಕ್ರಿ. ಶ. ೧೪೨೫ ಎಂಬುದು ಸದ್ಯಕ್ಕೆ ಸರಿ.

ತೆರಕಣಾಂಬಿ ಬೊಮ್ಮರಸನು ತಾನು ನೇಮಿಚಂದ್ರನ 'ತನಯಸುತಸೂನು' ಎಂದಿರುವುದರಿಂದ ಅವನ ಮುರಿಮಗನಾಗುತಾನೆ. ಅಂದರೆ ನೇಮಿಚಂದ್ರನ ಅನಂತರ ಮೂರನೆಯ ತಲೆಯವನಾಗುತ್ತಾನೆ. ಈಗಾಗಲೆ ಅಂಗೀಕಾರವಾಗಿರುವ ಐತಿಹಾಸಿಕ ಲೆಕ್ಕಾಚಾರದಂತೆ ತಲೆ ಒಂದಕ್ಕೆ ಇಪ್ಪತ್ತೈದು ವರುಷದಂತೆ ಮೂರು ತಲೆಗೆ ಎಪ್ಪತ್ತೈದು ವರುಷಗಳಾಗುತ್ತವೆ. ಅಂದರೆ

ಕ್ರಿ.ಶ. ೧೪೨೫ ಕ್ಕೆ ೭೫ ನ್ನು ಸೇರಿಸಿದರೆ ಕ್ರಿ. ಶ. ೧೫೦೦ ಆಗುತ್ತದೆ. ಆದುದರಿಂದ ಕವಿಚರಿತೆಕಾರರು ತೆರಕಣಾಂಬಿ ಬೊಮ್ಮ ರಸನ ಕಾಲ ಸು. ಕ್ರಿ. ಶ. ೧೪೮೫ ಎಂದು ಊಹಿಸಿರುವುದು ಸಮಂಜಸವಾಗಿದೆ.

ತೆರಕಣಾಂಬಿ

ಬೊಮ್ಮರಸನ ಸ್ಥಳ ತೆರಕಣಾಂಬಿ. ಕೇರಳ, ತಮಿಳುನಾಡು, ಹದಿನಾಡು ಅಥವಾ ದಕ್ಷಿಣ ಕರ್ಣಾಟಕದ ಗಡಿಯ ಕಲ್ಲುಗಳ ಇರುವ ಜಾಗ ಕೂಡುಗಲೂರು. ಮೂರು ಗಡಿಕಲ್ಲುಗಳ ಸಮೂಹ (ತ್ರಿ+ಕದಂಬ) ಇದ್ದ ಜಾಗ ತ್ರಿಕದಂಬಪುರ ಆಯಿತು. ಅಲ್ಲಿ ಲಂಬಕರ್ಣರಾಯನೆಂಬುವನು ಆರನೆಯ ಶತಮಾನದಲ್ಲಿ ತ್ರಿಕದಂಪುರ ಮುಂದೆ ತೆರಕಣಾಂಬಿಯಾಯಿತು.

ವಿಜಯನಗರ ಸಾಮ್ರಾಜ್ಯದ ಹದಿನಾಲ್ಕು ಪ್ರಸಿದ್ದ ವ್ಯಾಪಾರ ಕೇಂದ್ರ(**Guilds**)ಗಳಲ್ಲಿ ತೆರಕಣಾಂಬಿಯೂ ಒಂದು.

ವಿಜಯಪುರದ (ಗುಂಡು ಪೇಟ್ಟೆ) ರಾಮನಾಥದೇರವ ಪಾತ್ರಭೋಗದ ಕೇತವ್ವಯ ಜೀವಿತಕ್ಕೆ ಒಡಗಿ,ಅಕ್ಕಸಾಲಿಗ ಮತ್ತು ಕಂಚುಗಾರರ ಮೇಲೆತೆರಕಣಾಂಬಿಯ ವೀರಪಾಂಚಾಲರು ತೆರಿಗೆ ಹಾಕಿದ್ದಾರೆ.

---

**1** ಮೈಸೂರು ಗೆಝಟಿಯರ **5-852**

**2** ಎ .ಕ. **v preface II** ಪುಟ **201**

**3** ಎ. ಕ **VI** ಗುಂಡು ಪೇಟೆ **34 preface 42** ಶಾಸನ ಪುಟ **105**

ಇಂದಿಗೂ  ಪ್ರಸಿದ್ದವಾದ ತೆರಕಣಾಂಬಿ ಸಂತೆ ಕ್ರಿ.ಶ. ೧೫೫೪ ರಲ್ಲು ನಡೆಯು ತ್ತಿದ್ದುದಕ್ಕೆ ಶಿಲಾಶಾಸನದ ಉಲೇಖವಿದೆ.

ೀರಪಾರ್ವತಿರಾಯನು ತೆರಕಣಾಂಬಿ ರಾಜ್ಯವನ್ನು ಆಳುತ್ತಿದ್ದ , ಮೈಸೂರು ಅರಸ ಕಂಠೀರವ ನರಸರಾಜ ಒಡೆಯರು ಇದ, ಗತವೈಭವದಿಂದ ಮೆರೆದ ತೆರಕಣಾಂಬಿಯು ಮೈಸೂರು ಜಿಲೆಯ ಗುಂಡು ಪೇಟೆ ತಾಲೂಕಿನ ಅದೇ  ಹೆಸರಿನ ಒಂದು ಹೋಬಳಿ ಕೇಂದ್ರ.

## ಕವಿಯ ಆರಾಧ್ಯದೈವ

ಬೊಮ್ಮರಸರು ಸನತ್ಕುಮಾರ ಚರಿತೆಯ ಮೊದಲು ಪ್ರಾರ್ಥನಾ ಪದ್ಯದಲ್ಲಿ 'ಪಾರ್ಶ್ವ ಜಿನೇಂದ್ರಪಾಲ್ಲಿಸು ಮತಿಗೆ ಮಂಗಲವ' ಎಂದು ಪ್ರಾರ್ಥಿಸಿದ್ದಾನೆ. ಸಮಾಪಿ ಗದ್ಯದಲ್ಲಿ ಶ್ರೀಮತಾರ್ಶ್ವ ಜಿನೇಂದ್ರ ಚರಣಕಮಲ ಮತ್ತ ಭ್ರಮರ 'ನೆಂದು ತನ್ನ ಬಗ್ಗೆ ಹೇಳಿಕೊಂಡಿದ್ದಾನೆ. ಸಂಧಿಯ ಕಡೆಯ ಪದ್ಯಗಳಲ್ಲಿ 'ತೆರಕಣಾಂಬಿ ನಿವಾಸ ಪಾರ್ಶ್ವಜಿನೇಂದ್ರಚಂದ್ರಮನ ಚರಣ ಕಮಲ ಭ್ರಮರನಿಭ ಬೊಮ್ಮರಸ' ನೆಂದಿದೆ. ಬಹುಶಃ ಈಹೇಳಿಕೆಗಳನ್ನು ಗಮನಿಸಿ 'ಪದ್ಯಸಾರ' ದಲ್ಲಿ ಈತನು ಪಾರ್ಶ್ವ ಜಿನೇಂದ್ರ ಚಂದ್ರನ ಶಿಷ್ಯನೆಂದು ತಿಳಿದು ಬರುತ್ತದೆ.' ಎಂದಿದಾರೆ. ಆದರೆ ಇಲ್ಲಿ ಬರುವ 'ಪಾರ್ಶ್ವಜಿನೇಂದ್ರ ' ಕವಿಯ ಆರಾಧ್ಯದೈವವಾದ ಪಾರ್ಶ್ವನಾಥ ಜಿನ.

ಚಾಮರಾಜ ನಗರದ ಪಾರ್ಶ್ವನಾಥ ಬಸದಿಯಲ್ಲಿರುವ ಪಾರ್ಶ್ವನಾಥನ ಯಕ್ಷಿಪದಾವತಿಯ ವಿಗ್ರಹವು ತೆರಕಣಾಂಬಿದ ತಂದುದೆಂದು ಗೀಳಲಾಗುತ್ತಿದೆ. ಖೆರಕಣಾಂಬಿಯ ಪಾರ್ಶ್ವನಾಥಜಿನ

ಬೊಮ್ಮರಸನ ಆರಾಧ್ಯದ್ರುವವೆಂದು ಹೇಳಬುಹು. ಇಂದಿಗೂ ತೆರಕಣಾಂಬಿ ಸಂತೆಮಾಳದ ಸವಿಪದಲ್ಲಿ ಅನಾಥವಾಗಿ ನಿಂತಿರುವ ಈಪಾರ್ಶ್ವನಾಥಜಿನನ ಸುಂದರ ವಿಗ್ರಹದ ಸಂರಕ್ಷಣ ಅಗತ್ಯ.

ಕೃತಿಗಳು

ಈಗಾಗಲೇ ನೋಡಿರುವಂತೆ ಬ್ಬೊಮ್ಮರಸನ ಕೃತಿಗಳು ಎರಡು. ಒಂದು ಜೀವಂಧರ ಚರಿತೆ ಮತ್ತೊಂದು ಸನತ್ಕುಮಾರ ಚರಿತೆ. ಜೀವಂಧರ ಚರಿತೆಯಂತೊ

---

1 ಶುಭವಸು ಶ್ರೀವಿಜಯಭ್ಯುದಯ ಶಾಲಿವಾಹನ ಶಕ ವರುಷ ೧೩೮೧ ನೆ ಆ ಶ್ರೀಮದಾ ಜಾಧಿರಾಜ ಪರಮೇಶ್ವರ ಶ್ರೀ ವೀರಫ್ರಟ್ರಾಪ ಸದಾಶಿವರಾಯ ಮಹಾರಾಯರು ಪೃಥಿ ರಾಜ್ಯಂಗೆ ಯ್ಯಿ೯ರಲು ಹಾಗಯ ಜಯಸಂ x x x ಯರುತೆರಕಣಾಂಬೆ x x x ಸಂತೆಗೆ x x x

2 **There is a seated figure of parsvanatha in the parsvanatha Templ with his yaksha Dhaeanendra seated in a separate cell to the left. The latter is said tohave beeen brought form Terakanambi.**

ಹದಿನೈದನೆಯ ಶತಮಾನದಲ್ಲಿ ಮೂವರು ಕವಿಗಳ ಮನವೂಲಿಸಿತು. ಆ ಕಥಾವಾಸು ಹೀಗಿದೆ–

ರಾಜಪುರಿಯಲ್ಲಿ ಸತ್ಯಂಧರಯೆಂಬ ರಾಜನು ವಿಜಯಾವತಿಯೆಂಬ ಅರಸಿಯೊಡನೆ ಆಳುತ್ತಿದ್ದನು. ಅವನು, ಹಿರಿಯ ಮಂತ್ರಿಗಳು ಬೇಡವೆಂದರೂ ಸೌದೆಯನ್ನು ಹೊತ್ತು ಮಾರುತ್ತಿದ್ದ ಕಾಷ್ಠಾಂಗಾರನೆಂಬವನಿಗೆ ಮಂತ್ರಿ ಪದವಿಯನ್ನು ಕೊಟ್ಟನು.

ರಾಣಿ ವಿಜಯಾವತಿ ಒಂದು ರಾತ್ರಿ ಅಶೋಕವೃಕ್ಷ ಮುರಿದಂತೆ, ಅದರ ಬುಡದಲ್ಲಿ ಮತ್ತೊಂದು ಅಶೋಕವು ಚಿಗುರಿದಂತೆ, ಆ ಚಿಗುರಿದ ಅಶೋಕಕ್ಕೆ ಎಂಟು ಮಾಲೆಗಳಿದ್ದಂತೆ ಕನಸು ಕಂಡಳು. ಕನಸಿನ ಸಂಗತಿಯನ್ನು ರಾಜನಿಗೆ ತಿಳಿಸಿದಳು. ರಾಜನುಕನಸಿನ ಫಲವನ್ನು ಹೇಳಿದನು.

ದಿನಗಳು ಕಳೆದುವು. ಕಾಷಾಂಗಾರನು ಆಧಿಕಾರ ವ್ಯಾಮೊಹದಿಂದ ರಾಜನನ್ನು ಕೊಂದನು. ರಾಣಿ ವಿಜಯಾವತಿ ಸಶಾನದಲ್ಲಿಮಗುವನ್ನು ಹಡೆದಳು. ಅ್ವಷ್ಟರಲ್ಲಿ ಗಂಧೋತ್ಕಟನೆಂಬುದುವನು ಗತಿಸಿದ ತನ್ನ ಮಗುವಿನ ಅಂತ್ಯ ಸಂಸ್ಕಾರಕ್ಕೆ ಸಶಾನಕ್ಕೆ ಬಂದನು. ವನದೇತೆಯ ಆಜೆಯಂತೆ ವಿಜಯಾವತಿ ಗಂಧೋತ್ಕಟನಿಗೆ ಕಾಣುವಂತೆ ತನ್ನ ಮಗುವನ್ನು ಇರಿಸಿ ಮರೆಯಾದಳು.

ಗಂದೋತ್ಕಟನು ಮನೆಗೆ ತೆಗೆದುಕೊಂಡು ಬಂದು ಮಗುವಿಗೆ ಜೀವಂಧರನೆಂದು ಹೆಸರಿಟ್ಟನು. ಜೀವಂಧರನು ಇತರ ಐನೂರು ಬಾಲಕರೊಡನೆ ಬೆಳೆದನು. ಬೆಳೆದು ಆರನ್ಯಂದಿ ಮುನಿಗಳಲ್ಲಿ ವಿದ್ಯಾಭಾಸ ಮಾಡಿ ಸಕಲ ಶಾಸ್ತ್ರಾಪಾರಂಗತನಾದನು. ಆ ಮುನಿಗಂಳಿಂದ ತನ್ನ ಚರಿತೆಯ ನಿಜ ಸಂಗತಿಯನ್ನು ತಿಳಿದನು. ಗುರುವಿನ ಬಯಕೆಯಂತೆ ಕಾಷ್ಠಾಂಗಾರನನ್ನು ಕೊಲ್ಲಲು ಸೂಕ್ತ ಸಮಯಕ್ಕೆ ಕಾಯುತ್ತಿದ್ದನು.

ಹೀಗಿರುವಲ್ಲಿ ಒಂದು ಸಲಶಬರರು ಗೋವುಗಳನು ಹೊಡೆದುಕೊಂಡು ಹೋದರು. ರಾಕನಾದ ಕಾಷ್ಠಾಂಗರನು ಗೋವುಗಳನ್ನು ಹಿಂದಿರುಗಿಸಲು ಆಗಲಿಲ್ಲ. ಆಗ ಜೀವಂಧರನು ಶಬರರನ್ನು ಬಡಿದಟ್ಟಿ ಗೋವುಗಳನ್ನು ಹಿಂದಿರುಗಿಸಿದನು.

ಜೀವಂಧರನು ವೀಣಯನ್ನು ಬಾರಿಸಿ ಗಂಧರ್ವದತ್ತೆಯನ್ನು ಮೆಚಿಸಿ ಮದಿವೆ ಯಾದನು. ಎದಿರಿಸಿದ ರಾಜರನ್ನು ಗೆದ್ದನು. ಗುಣಮಾಲೆ,ಪದಾ, ಕ್ಷೇಮಲಿ,

---

1 ೧. ಪೆನುಗೊಂಡೆಯ ಶಾಂತೀಶ್ವರ ಬಸದಿಯಾಲ್ಲಿ ಭಾಮಿನಿ ಷಟ್ಪದಿಯಲ್ಲಿ ರಚಿಸಿದ ಭಾಸ್ಕರ (ಸು.1425). ಭಾಸ್ಕನ ಕಾಲ ಸು.1606 ಎಂಬ ಅಭಿಪಾಯವೂ ಇದೆ (ಪ್ರ.ಕ.)

೨. ಹಾಡುವಳಿಯ (ಸಂಗೀತಪುರ) ಸಾಳುವರ ಸಂಗಮಭೂಪನ ಆಸ್ಥಾನದಲ್ಲಿ ಜೀವಂಧರ ಚರಿತೆಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ ಕೋಟೀಶ್ವರ (ಸು. **1440**) ತುಳುಸಾಳುವರ ಆಸ್ಥಾನದಲ್ಲಿದ್ದ ಕನ್ನಡ ಕವಿಗಳ ಕಾಲ ವಿಚಾರ ಡಾ॥ ಸೂರ್ಯನಾಥ ಕಾಮತ, ಕನ್ನಡ ನುಡಿ ಅಕ್ಟೋಬರ್ ೧೯೬೮. ಸಂಪುಟ ೩೧.ಸಂಚಿಕೆ೧೦.

೩. ಜೀವಂಧರ ಸಾಂಗತ್ಯವನ್ನು ರಚಿಸಿದ ತೆರಕಣಾಂಬಿ ಬೊಮ್ಮರಸ(ಸು. **1485).**ಅನಂಗತಿಲಕೆ, ಕನಕಮಾಲೆ, ಸುರಮಂಜರಿ, ಲಕ್ಷಣೆ ಎನ್ನುವ ಎಂಟು ಜನರನ್ನು ಮದುವೆಯಾದನು. ಅನಿರೀಕ್ಷಿತವಾಗಿ ಭೇಟಿಯಾದ ತಾಯಿಯೊಡನೆ, ಕಾಷ್ಠಾಂಗಾರನನ್ನು ಕೊಂದು ರಾಜ್ಯವಾಳುತ್ತಿದ್ದನು.

ಒಂದು ದಿನ ಅರಮನೆಯ ಮುಂದಿನ ತೋಟದಲ್ಲಿ ಆಡುತ್ತಿದ್ದ ಕಪಿಗಳ ಹಿಂಡನ್ನು ನೋಡಿದನು. ಆಡುತ್ತಿದ್ದಂತೆಯೇ ಕಪಿಗಳು ಕಾದಾಡಿದುವು. ಹಲವು ಸತ್ತವು. ಅದನ್ನು ನೋಡಿದ ಜೀವಂಧರನಿಗೆ ವೈರಾಗ್ಯ ಹುಟ್ಟಿತು. ಖನ್ನ ಮಗ ವಸುಂಧರನಿಗೆ ಪಟ್ಟ ಕಟ್ಟಿದನು, ತಪಸ್ಸು ಮಾಡಿ ಮೋಕ್ಷವನ್ನು ಪಡೆದನು.

ಸನತ್ಕುಮಾರ ಚರಿತೆಯ ಕಥಾಸಾರ

೧.

ರಾಜಪುರಿ ಮಗಧದ ರಾಜಧನಿ. ಶ್ರೇಣಿಕ ಅಲ್ಲಿನ ಅರಸು. ಚೇಳಿನ ಅವನ ಅರಸಿ. ಶ್ರೇಣಿಕ ಮಹಾರಾಜನು ಓಲಗದಲ್ಲಿದ್ದಾಗ ತೋಟಿಗನೊಬ್ಬ ಹೂವು ಹಣುಗಳನ್ನ ಕೊಟ್ಟು ಊರಿನ ಸಮಿಪದ. ಉದ್ಯಾನದಲ್ಲಿರುವ ವೀರ ಜಿನಪತಿಯ ಸಮವಸರಣೋತ್ಸವವನ್ನು ತಿಳಿಸಿದನು.

ಶ್ರೇಣಿಕನು ಗುಡುಗು ಕೇಳಿದ ನವಿಲಂತೆ ಹರ್ಷಿಸಿ ತೋಟ್ಟಿಗನಿಗೆ ಇಡುಗೊರೆ ಕೊಟ್ಟು ಪರಿಜನರೊಡನೆ ಉದ್ಯಾನವನಕ್ಕೆ ಹೊರಟನು. ಆ ದಾರಿಯಲ್ಲಿ ಮರ ಗಿಡಗಳು ಅಕಾಲದಲ್ಲಿ ಹೊನು ಬಿಟ್ಟಿದುವು. ಪ್ರಾಣಿಗಳು ವೈರಭಾವವನ್ನು ತೊರೆ ದಿದ್ದುವು. ಅರಸು ಇದನ್ನೆಲ್ಲನೋಡಿ ಹರ್ಷಿಸಿ ಗಂಧಕುಟ್ಟಿಯನ್ನು ಸಮಿಪಿಸಿ ಗೌತಮ ಮುನಿಗಳಿಗೆವಂದಿಸಿ ಗೌತಮರನ್ನು ಹಿಂದಿನ ಪುಣ್ಯಪುರುಷ ಚರಿತ್ರೆ ಯನ್ನು ತಿಳಿಸಬೇಕೆಂದು ಕೇಳಿದನು. ಗೌತಮರು 'ಪೂರ್ವದಲ್ಲಿ ಚಕ್ರವರ್ತಿತ್ವದ ಮಹಾಶ್ರೀಯನ್ನು ಬಿಟ್ಟು ತಪಮಾಡಿ ಪಾಪ ನಿರ್ಮೂಲನ ಮಾಡಿದನ ಕಥೆಯಾನ್ನು ಹೇಳುವೆ ಕೇಳು'ಯೆಂದು ಹೇಳತೊಡಗಿದರು.

೨

ಕುರುಜಾಂಗಣ ದೇಶದ ಪಟ್ಟಣ ಹಸಿನಾಪ್ಪುರ. ವಿಶ್ವಸೇನ ಅಲ್ಲಿನ ಅರಸು. ಸಹದೇವಿ ಅವನ ರಾಣಿ. ಆವರ ಮಗ ಸನತ್ಕುಮಾರ. ಅವನು ಜಿನಪದ ಕಮಲ ಯುಗ ಸಭಕಿಸಾರ. ಮಗೇಂದ್ರಸಿಂಹ ಅವನ ಗೆಳೆಯ. ಇಬ್ಬರೂ ದೇಹವೆರಡು, ಜೀವವೊಂದುಯೆಂಬಂತಿದ್ದರು.

ಸುಭೂರಾಮ ಅವಂತಿ ದೇಶದ ಏಕಚಕ್ರ ನಗರದ ಅರಸು. ವಿಶ್ವಸೇನನ ಗೆಳೆಯ. ಅವನ ಮನ್ನೆಯರು ಮಲೆತು ಅವನಿಗೆ ಕಪ್ಪ ಕಾಣಕಗಳನ್ನು ಕೊಡುತ್ತಿರ ಲಿಲ್ಲ. ರಾಯಸದ ಮೂಲಕ ಈಸಂಗತಿಯನ್ನು ಸುಭೂರಾಮನು ವಿಶ್ವಸೇನನಿಗೆ ತಿಳಿಸಿದನು. ಗೆಳೆಯನಿಗೆ ಸಹಾಯ ಮಾಡಲು ವಿಶ್ವಸೇನ ಪಸಿಬಲನಾಗಿ, ಸನ್ನಾಹ ಭೇರಿ ಹೊಡಿಸಿ ಉದ್ಯಾನದಲ್ಲಿ ಬೀಡು ಬಿಟ್ಟಿದ್ದನು.

ಆಗ ಸನತ್ಕುಮಾರ 'ರಣಕತಿ ದಿಟ್ಟನಿವನಗುದೆನಿಸಿ' ತಂದೆಯ ಮುಂದೆ ನಿಂತನು 'ನಾನು ಇಂದಿನ ಯುಡ್ಡದಲ್ಲಿ ಶತ್ರು ಗಳನ್ನು ಯಮನಪುರಕ್ಕೆ ಅಟ್ಟಿ ಬರುವೆ. ನೀವು ನಹರಕ್ಕೆ ಹಿಂದಿರುಗಿ' ಎಂದುನು. ಆಗ ರಾಜನು ನಗುತ್ತ 'ನೀನ್ನ ಇನೂ ಚಿಕ್ಕವನು. ನಿನಗೆ ಸಮರಪಾಂಡ್ಯಿತ ಘಟಿಸುವುದೆ' ಎಂದನು. 'ನಾನು ನಿಮ್ಮ ಮಗನಲ್ಲವೆ. ಮದಿಸಿದ ಆನೆಗೆ ಸಿಂಹದ ಮರಿ ಹೆದರುವುದೆ' ಎಂದ ಸನತ್ಕುಮಾರನ್ನು ಅರಸನು ಯುದ್ದಕ್ಕೆ ಕಳುಹಿಸಿ ತಾನು ನಗರಕ್ಕೆ ಹಿಂದಿರುಗಿದನು.

ರನತ್ಕುಮಾಅರನು ಯುದೋತ್ಸಾಹದಲ್ಲಿ ದುಷ್ಟಕುದುರೆಯೊಂದನ್ನು ಹತ್ತಿದನು. ಆ ಕುದುರೆ ರಾಜಕುಮಾರನನ್ನು ಎತ್ತಿಕೊಂಡು ಲಕ್ಷಗೃಹವೆಂಬ ಅರಣ್ಯದಲ್ಲಿ ಮನಸ್ಸು ಬಂದ ಕಡೆಗೆ ಓಡಿತು. ಕುದುರೆಯನ್ನು ಹಿಂಬಾಲಿಸಿದ ಸೈನ್ಯ ರಾಜಕುಮಾರನನ್ನು ಕಾಣಲಿಲ್ಲ. ರಾಜನಿಗೆ ವಿಚಾರ ತಿಳಿಯಿತು. ಸೈನ್ಯದೊಡನೆ ಹೊರಟ ರಾಜ 'ಎಲೆ ಸನತ್ಕುಮಾರ, ಎಲ್ಲಿಹೋದೆ.? ನಿನ್ನಂಥ ಚೆಲುವನನ್ನು ಮೂರು ಜಗತ್ತಿನಲ್ಲಿಯೂ ಕಾಣ. ನನ್ನ ವಂಶವನ್ನು ಬೆಳಗುವವರು ಯಾರು?' ಎಂದು ಫ್ರಲಾಪಿಸಿದನು. ಆಗ ಮಹೇಂದ್ರಸಿಂಹನು 'ಕಾಡಿನಲ್ಲಿ ಸುಮ್ಮನೆ ಅತ್ತರೆ ಏನು ಫಲ? ಭೂಮಿಯಲ್ಲಿ ರಾಜಕುಮಾರ ಇಲಾದಿದ್ದರೆ ಉರಗಲೋಕವನ್ನಾದರೂ ಹೊಕ್ಕು ಹುಡಿಕಿ ತರುವೆ. ನೀವು ನಗರಕ್ಕೆ ಹಿಂದಿರುಗಿ' ಎಂದು ಸಂತವಿಸಿದನು. ರಾಜನು ನಗರಕ್ಕೆ ಮರಳಿದನು.

ಸನತ್ಕುಮಾರನನ್ನು ಹುಡುಕುತ್ತ ಮಹೇಂದ್ರಸಿಂಹನು ಗಿರಿವನಗಳಲ್ಲಿ ಅಲೆದನು. ಗ್ರಾಮ ನಗರ ಮಡಂಬ ಖರ್ವಡಗಳಲ್ಲಿ ಗೆಳೆಯನ್ನು ಹುಡುಕುತ್ತ ಫ್ರಿಯಂಗುಷಾ ವನಕ್ಕೆ ಬಂದನು. ದೇವಾಲಯವೊಂದು ಅಲ್ಲಿದ್ದಿತು. ಗೆಳೆಯನನ್ನು ಕಾಣುವ ತವಕದಲ್ಲಿ ಅಲ್ಲಿ ಮಲಗಿದನು. ಮನೋಹರಿಯೆಂಬ ಜಾವದಲ್ಲಿ ನೂರು ಹೆಣಾನೆಗಳ ಮಧ್ಯೆ ಒಂದು ಗಂಡಾನೆ ಕೊಳದಲ್ಲಿ ನಲ್ಲಿದಾಡುವುದನ್ನು, ಚಿಗುರಿದ ಮಾವಿನಮರವನ್ನ ಕನಸಿನಲ್ಲಿ ಕಂಡು ಎಚರಹೊಂಡನು. ತನ್ನ ಕಾರ್ಯ ಸಿದ್ದಿಸುವುದೆಂದು ಮತ್ತೆ ನಿದ್ರೆ ಮಾಡಿದನು.

ಫ್ರಿಯಂಗುಷಾವನದಲ್ಲಿ ಕರಣೇಭೂತದೇವನೆಂಬ ವ್ಯಂತನಿದ್ದನು. ಅವನು ಗಿರಿ ವನಗಳಲ್ಲಿ ತೊಳಲ್ಲಿ ಬಳಲಿ ಮೈಮರೆತು ಮಲಗಿದ್ದ ಮಹೇಂದ್ರಸಿಂಹನನ್ನು ಕಂಡನು. ಇವನ ಇರವನ್ನು ನೋಡಿ ವ್ಯಂತರನಿಗೆ ಕರುಣ ಮೂಡಿತು. ಭೂತರಣೋಪವನಕ್ಕೆ ಮಹೇಂದ್ರಸಿಂಹನನ್ನು ತೆಗೆದುಕೊಂಡು ಹೋಗಿ ಇರಿಸಿದನು.'

ಬೆಳಗಾಯಿತು, ಹಕ್ಕಿಗಳು ಚಿಪಿಲಿಯೆಂದುಲ್ಲಿದುವು. ತಂಗಾಳಿ. ಚಿಲಿಪಿಲ್ಲಿಯೆಂದುಲಿದುವು. ತಂಗಾಳಿ ಬೀಸಿತು. ನಿದ್ರೆ  ತಿಳಿದೆದ್ದ ಮಹೇಂದ್ರಸಿಂಹ ನೀಲೋತಲ, ಕಮಲ, ಕಲುಹಾರಗಳು ತುಂಬಿದ ಕೊಳವನ್ನು ಕಂಡನು. ನಾನು ಮಲಗಿದ ಜಾಗ ಇದಲ್ಲ.ಇದೇನು ಆಶರ್ಯ್ಚ ಎಂದು ಭೂತಾರಣ್ಯದ ಮರದಡಿಗಳಲ್ಲಿ ತಿರುಗಾಡಿದನು.

ಮಹೇಂದ್ರಸಿಂಹನು ತಿರುಗಾಡುತ್ತಿರುವಾಗ ಚಾರು ಧೊಪದ ಧೂಮದದೇಸಕದ ಕಂಪು ತೀಡಿತು.  ಮುರಜಧ್ವಾನ ಕೇಳಿಸಿತು. ಸನಿಹದಲ್ಲಿ ದೇವಾಲಯವಿದೆಯೆಂದು ಭಾವಿಸಿ ಮುಂದೆ ಬಂದವನಿಗೆ ಹರ್ಮ್ಯವೊಂದು ಕಂಡಿತು. ಆ ಹರ್ಮ್ಯ ಪಚೆಯ ಕಂಭ, ವಜ್ರದ  ತೊಲೆ ,ಮಾಣಕದ ನೆಲೆಯಾಗಿದ್ದಿತು.    ಅಲ್ಲಿ ಖೇಚರ ಸ್ತ್ರಿಯರ ಸಂಗೀತ ನಾಟ್ಯಗಳ ಮಧ್ಯದಲ್ಲಿ ಸನತ್ಕುಮಾರನು ಕುಳ್ಳಿತಿದ್ದನು. ಖೇಚರ ಲಲನೆ ಯರು ಚಾಮರ ಬೀಸುತ್ತಿದ್ದರು. ಸನತ್ಕುಮಾರನನ್ನು ಕಂಡ ಮಹೇಂದ್ರಸಿಂಹನಿಗೆ ಬಡನಿಗೆ ನಿಕ್ಷಪ, ಬಾಯಾರಿದವನಿಗೆ ಸರೋವರ. ಸಮುದ್ರಕ್ಕೆ ಚಂದ್ರ,ದುಂಬಿಗೆ ಹೂವಿನ ಕಂಪು,ಬಹಳ ದಿನಗಳ ಮೇಲೆ ದೊರೆತಂತಾಯಿತು.

ಸನತ್ಕುಮಾರನನ್ನು ಕಂಡು ಮಹೇಂದ್ರಸಿಂಹನು ಅವನ ಪಾದಗಳಿಗೆ ನಮಸ್ಕರಿ ಸಿದನು. ಸಂತೋಷ     ಹೆಚ್ಚಿ ಮ್ಯಮರೆತನು. ದೃತ್ಯೋಪಚಾರರಿಂದ ಎಚ್ಚರಗೊಂಡ ಮೇಲೆ ಮಗೇಂದ್ರಸಿಂಹನು ‘ಕುಶಲವೆ? ಆರು ತಿಂಗಳಿನ ಮೇಲೆ ನಿನ್ನ ಮುಖವನ್ನು ನೋಡಿದೆ. ನಿನಗಾಗಿ ದೆಸೆದೆಸೆಗಳಲ್ಲಿ ತಿರುಗಿದೆ. ಸ್ವಾಮಿ, ಹೇಳು ನೀನ್ನು ಕ್ಷೇಮವೆ? ಎಂದು ಸನತ್ಕುಮಾರನನ್ನು ಕೇಳಿದನು. ‘ತಾಯಿ ತಂದೆಯರನ್ನು ನನ್ನನ್ನು ಬಿಟ್ಟು ನೀನ್ನು ಹೇಗೆ ಇದ್ದ’ ಎಂದು ಕಂಬನಿದುಂಬಿದನು.

ರಾಜಕ್ಕುಮಾರನು ಮಹೇಂದ್ರಸಿಂಹನನ್ನು ವಿನಯದಿಂದ ಎತ್ತಿ ಸಂತವಿಸಿದನು. ಬಿಂಬಾಧರ ವಿಲಾಅಸಿನಿಯೆಂಬ ಸಖಿಯನ್ನು ಕರೆದು ಗೆಳೆಯನಿಗೆ ಉಪಚಾರನ್ಮಾಡುವಂತೆ ಹೇಳಿದನು. ಸಾನಪಾನಾನಂತರ ಪಯಣದ ಬಳಲಿಕೆಯನ್ನು ಕಳೆದುಕೊಂಡು ಮಹೇಂದ್ರಸಿಂಹ ‘ಈ ಸುಸರತಿಯರಿಗೆ, ವಿದ್ಯಾಧರಿಯರು’ ಎಂದು ಸನತ್ಕುಮಾರನು ಹೇಳಿದನು. ‘ನೀನು ಇವರನ್ನು ವರಿಸಿದ

ರೀತಯನ್ನು ತಿಳಿಸು' ಎಂದು ಕೇಳಿದನು ಮಹೇಂದ್ರಸಿಂಹ . ನಿನಿನ ರಾತ್ರಿ ನಾಟಕವನ್ನು ನೋಡಿ ನಿದ್ದೆಗೆಟ್ಟ ಸನತ್ಕುಮಾರ ಅವಲೋಕಿನಿ ಎನ್ನುವವಳನ್ನು ಕರೆಸಿ ಎಲ್ಲ ಸಂಗತಿಯನ್ನು ಮಹೇಂದ್ರಸಿಂಹನಿಗೆ ಹೇಳ ತೊಡಗಿದಳು–

೩

"ಮಗೇಂದ್ರಸಿಂಹನೇ , ಏನು ಹೇಳಲಿ ? ದುಷ್ಟ ಕುದುರೆಯು ರಾಜಕುಮಾರನನ್ನು ತೆಗೆದುಕೊಂಡು ಹೋದ ರೀತಿಯನ್ನು ನೀನ್ನು ಬಲೆ. ಕುಮಾರನನ್ನು ಹೊತ್ತ ಕುದುರೆ ಹಗಲು ರಾತ್ರಿಯೆನ್ನದೆ ಮೂರು ದಿವಸ ದೌಡಾಯಿಸಿತು, ಕಾಡಿನಲ್ಲಿ ಮುಳ್ಳುದಸಿ ತಾಗಿ ಕುರುಳು ಹರಿದು ಸತ್ರಿತ್ತು. ಮದಗಜವು ಮಡುವಿನಲ್ಲಿ ಬಿದ್ದು ಮರುಗುವಂತೆ ರಾಜಕುಮಾರನು ಆದನು. ರಾಜಕುಮಾರನಿಗೆ ಹಸಿನಾಪುರದ ಸಮಸ ವೃಭವವೂ ಬಯಲಾಯಿತು. ಯಾವ ದ್ಜೇಶ, ಯಾವ ದಿಕ್ಕು ಎಂಬುದು ತಿಳ್ಲಿಯದೆ ಇಕ್ಕಿ ಬಂದ ದು;ಖದಲ್ಲಿದ್ದನು. ಹಸಿವು ಬಾಯರಿಕೆಯಿಂದ ಬಳಲಿ ಆಲದ ಮರದ ನೆರಳಿನಲ್ಲಿ ಮೂರ್ಛೆ ಹೋದನು.

ಮನೋಹರ ಎನ್ನುವ ಯಕ್ಷ್ ಆ ಆಲದ ಮರದಲ್ಲಿ ವಾಸಿಸುತ್ತಿಡ್ದನು.ಕೊರಗಿ ಮಲಗಿದ ಕುಮಾರನನ್ನು ಕಂಡು 'ಭೂತಳಕೆ ವರಹನು ಚಕ್ರಿತ್ಯ್ವದಲಿ' ಎಂದು ಅವನಿಗೆ ನೀರನ್ನು ಸಿಂಪಡಿಸಿದನು. ಎಚ್ಚೆತ್ತ ರಾಜಕುಮಾರನಿಗೆ ಚಿನ್ನದ ಬಟ್ಟಲಿನಲ್ಲಿ ನೀರನ್ನು ಕೊಟ್ಟನು. 'ನೀನು ಯಾರು? ಎಲ್ಲಿಂದ ನೀರು ತಂದೆ' ಎಂದುನು ರಾಜಕುಮಾರ.

"ನಾನು ಮನೋಹರನೆಂಬ ಯಕ್ಷ. ಈ ಆಲದ ಮರದಲ್ಲಿ ವಾಸಿಸುತ್ತೇನೆ. ನಿನ್ನ ಸ್ಥಿತಿಯನ್ನು ಕಂಡು ನನಗೆ ಮರುಕವುಂಟಾಯಿತು. ಮಾನಸರೋವರದಿಂದ ನೀರನ್ನು ತಂದಿದೇನೆ' ಎಂದನು . ಆಗ ರಾಜಕುಮಾರ 'ನಾನು ಬಹಳ ಬಳಲಿದ್ದೇನೆ. ಈ ನೀರು ಸಾಲದು.ಆಕೊಳದ್ದ ಬಳಿಗೆ ನನ್ನುನ್ನು ಕರೆದುಕೊಂಡುಉ ಹೋಗು.ಆಲ್ಲಿ ಮಿಂದು ಮನದಣಿಯುಂವತೆ ನೀರು ಕುಡಿದರೆ ನ್ನನ್ನ ಬಳಲಿಕೆ ತೊಲಗುವುದು' ಎಂದನು. ಯಕ್ಷನು ರಾಜಕುಮಾರನನ್ನು ಸರೋವರದ ಬಳಿಕರೆದುಯ್ದನು.

ಕೊಳಕ್ಕೆ ಎದುರಾಗಿ ರಾಜಕುಮಾರನು ನಡೆದನು. ಸಿತಯಕ್ಷನೆಂಬ ಖಳನೊಬ್ಬ ರಾಜಕುಮಾರನನ್ನು ಎದುರಿಸಿದನು. ಪಾಶದಿಂದ ರಾಜಕುಮಾರನನ್ನು ಬಿಗಿದನು. ರಾಜಕುಮಾರನು ಆಪಾಶವನ್ನು ಹರಿದನು. ಇಬ್ಬರೂ ಭಯಂಕರವಾಗಿ ಹೋರಾಡಿ ದರು. ಕುಮಾರನು ಕೆರಳಿ ತನ್ನ ವಜ್ರಮುಷ್ಟಿಯಿಂದ ಸಿತಯಕ್ಷನನ್ನು ಕೊಂದನು. ದೇವತೆಗಳು ಜಯಘೋಶ ಮಾಡಿ ಹೂಮಳೆಗರೆದರು.

ಕೊಳದು ತೀದರಲ್ಲಿದ್ದ ಸನತ್ಕುಮಾರನಿಗೆ ಇಂದ್ರಪ್ರಭನೆಂಬ ಖೇಚನು ನಮಸ್ಕರಿಸಿದನು. 'ನೀನು ಯಾರು ?' ರಾಜಕುಮಾರನು ಪ್ರಶಿಸಿದನು. 'ರಾಜಕುಮಾರ, ನಿನ್ನ ಬರವನ್ನು ನಾನು ಹಲವು ದಿನದಿಂದ ಕಾಯುತ್ತಿದ್ದೆ. ವಿಮಾನವೇರು' ಎಂದು ಪುಷ್ಪಕ ವಿಮಾನದಲ್ಲಿ ಒಯ್ದ್ದು ಭೂತೋಪವನದಲ್ಲಿಳಿಸಿದನು.

ಆ ವನದಲ್ಲಿ ವಿದ್ಯಾಧರ ಸ್ತ್ರಿಯರು ವಸಂತೀತ್ಸವದ ಜಲಕೇಳಿಯಾಡುತ್ತಿ ದ್ದರು. ಮೊಲ್ಲೆ ಮಲ್ಲಿಗೆ ಸಪಗೆ ಸಂಪಗೆ ಪಾದರಿಗಳನ್ನು ಸಂಗ್ರಹಿಸಿದರು. ಹಾಗೆ ಹೊವು ಬಿಡಿಸುವಾಗ ಮನ್ಮಥ ಸದೃಶನಾದ ರಾಜಕುಮಾರನನ್ನು ಕಂಡು ಮದನ ತಾಪಕ್ಕೆ ಒಳಗಾಗಿದ್ದು.

ಭೂತೋಪವನದಲ್ಲಿ ಸನತ್ಕುಮಾರನನ್ನು ಇಳಿಸಿದ ಇಂದ್ರಪ್ರಭನು ಫ್ರಿಯ ವಂಶಾಖ್ಯಪುರಕ್ಕೆ ಹೋದನು. 'ಆದೇಶ ಪುರುಷನನ್ನು ತೆಗೆದುಕೊಂಡು ಬಂದೆ' ಎಂದು ಭಾನುವೇಗನಿಗೆ ಹೇಳಿದನು. ಭಾನುವೇಗನಿಗೆ ತುಂಬ ಸಂತೋಷವಾಯಿತು. ವಿಪುಳಶ್ರೀಯೆಂಬುವಳನ್ನು ಕರೆದು ಉಡುಗೊರೆಯಿತ್ತು. ಸನತ್ಕುಮಾರನಿಗೆ ಸತ್ಕಾರ ಮಾಡಲು ಕಳಿಸಿದನು. ಭೂತೋಪವನಕ್ಕೆ ಬಂದ ವಿಪುಳಶ್ರೀ ರಾಜಕುಮಾರನಿಗೆ ಸಾನಪಾನ ಮಾಡಿಸಿದಳು. ಗಂಧಮಾಲ್ಯಾದಿಗಳನ್ನು ಕೊಟ್ಟಳು. ಅನಂಗ

ಸೌಂದರಿ ಎಂಬವಳಿಗೆ ನರ್ತಿಸಲು ಹೇಳಿದಳು. ನರ್ತನವನ್ನು ನೋಡಿ ಸಂತೋಷಗೊಂಡ ರಾಜಕುಮಾರ 'ಈ ಎಲ್ಲ ಉಪಾಚಾರವನ್ನು ನನಗೆ ಏಕೆ ಮಾಡುತ್ತಿ ರುವೆ'ಯೆಂದು ಕೇಳಿದನು.

ರಾಜಕುಮಾರನ ಪ್ರಶೆಗೆ ವಿಪುಳಶ್ರೀ ಹಿಂದೆ ನಡೆದುದನ್ನು ಹೇಳುತ್ತ ಹೋದಳು– 'ವಿಜಯಾರ್ದ ಶೃಲದ ಬಳಿ ಪ್ರಿಯವಂಶಾಖ್ಯಪುರವಿದೆ. ಆಪುರದ ಅರಸು ಭಾನುವೇಗನೆಂಬ ವಿದ್ಯಧರು. ಅವನಿಗೆ ಲಕ್ಷೀಮತಿ, ಕನಕಾಂತೆ,ಮಂದಾರಸೇನೆ , ಹೇಮಮಾಲಿನಿ. ಗುಣವತಿ, ವಿಶ್ವಮಾಲಿನಿ, ಪದಗಂಧಿನಿ. ರಾಮೆ ಎನ್ನುವ ಎಂಟುಜನ ಹೆಣ್ಣುಮಕ್ಕಳು.

ಭಾನುವೇಗನ ಹೆಣ್ಣು ಮಕ್ಕಳು ಮದುವೆಗೆ ಬಂದರು. ಭಾನುವೇಗನು ಒಂದು ದಿನ ನೃಮಿತ್ತಿಕನನ್ನು ಕರೆಸಿ 'ನ್ನನ ಮಕ್ಕಳ ಗಂಡನಾಗುವವನು ಯಾರು, ಹೇಳಿ ' ಎಂದನು. ನೃಮಿತ್ತಿಕನು ವಿಚಾರ ಮಾಡಿ 'ಕುಲಕ್ಷ ಸರಸಿಯಲ್ಲಿ ಸಿತಯಕ್ಷನನ್ನು ಕೊಲ್ಲುವ ಹಸಿನಾಪುರದ ರಾಜನಮಗ ನಿನ್ನ ಅಳಿಯ' ನೆಂದನು.

ನೃಮಿತ್ತಿಕನಿಂದ ವಿಚಾರ ತಿಳಿದ ಭಾನು ವೇಗನು ಗುಪಿನಿಯೆಂಬ ವಿದ್ಯವನ್ನು ಕಳಿಸಿದನು. ಆ ವಿದ್ಯೆ ಕುದುರೆಯ ರೂಪತಾಳಿ ನಿನ್ನನ್ನು ಅರಣ್ಯಕ್ಕೆ ತಂದುಕಾಡು ಪಾಲು ಮಾಡಿತು. ಅಂದಿನಿಂದ ಇಂದ್ರಪ್ರಭನು ನಿನಗಾಗಿ ಕೊಳದ ಬಳಿ ಕಾಯ ತೊಡಗಿದನು. ನೀನು ಸಿತಯಕ್ಷನನ್ನು ಗೆದೆ.ರಾಜನು ಪ್ರೀತಿಯಿಂದ ನಿನಗೆ ಉಪಚಾರ ಮಾಡಲು ಕಳಿಸಿದನು. 'ಅದೋ, ರಾಜನೇ ಬರುತ್ತಿದಾನೆ ನೋಡು' ಎಂದಳು.

ಸನತ್ಕುಮಾರನು ಭಾನುವೇಗನಿಗೆ ನಮಸ್ಕರಿಸಿದನು. ಖೇಚರ ರಾಜನು ಹರಿಸಿ ಅಪ್ಪಿಕೊಂಡು 'ನೀನು ಯಾವ ದೇಶದವನು ? ಯಾವ ಅರಸಿನ ಮಗ' ಎಂದು ಪ್ರಶಿಸಿದನು. ಸನತ್ಕುಮಾರನನ್ನು ಆನೆಯ ಮೇಲೆ ನಗರಕ್ಕೆ ಕರೆದೊಯ್ದನು.

ಶುಭ ಮುಹೂರ್ತದಲ್ಲಿ, ಎಲ್ಲಿ ರಾಜರುಸೇರಿರಲು ಎಂಟುಜನ ವಿದ್ಯಾಧರಿ ಯರು ರಾಜಕುಮಾರನ ಕೊರಳಿಗೆ ಮಾಲೆಯನ್ನು ಹಾಕಿದರು. ದಿಕ್ಕನ್ನೆಯರ ಮಧ್ಯೆ ಇರುವ ಸೂರ್ಯನಂತೆ ರಾಜಕುಮಾರನ ಕೊರಳಿಗೆ ಮಾಲೆಯನ್ನು ಹಾಕಿದರು. ದಿಕ್ಕನೆಯರ ಮದ್ಯೆ ಇರುವ ಸೂರ್ಯನಂತೆ ರಾಜಕುಮಾರನಿದ್ದನು. ಭಾನುವೇಗನು ಕುಮಾರಿಯರನ್ನು ಧಾರೆಯೆರೆದುಕೊಟ್ಟನು.ಮದುವೆ ಮುಗಿಯಿತು. ಸನತ್ಕುಮಾರನು ಸೌಧಾಗ್ರದ ಚಂದ್ರಶಾಲೆಯಲ್ಲಿ ರಾತ್ರಿ ನಿದ್ರಿಸಿದನು.

ಯಕ್ಷಿಯೊಬ್ಬಳು ನಿದ್ರಿಸುತ್ತಿದ್ದ ರಾಜಕುಮಾರನನ್ನು ಕಂಡು ಹೀಗೆ ಆಲೋಚಿಸಿದಳು. 'ಜ್ಯೋತೀರ್ವನದಲ್ಲಿ ಶೋಕಿಸುತ್ತಿರುವ ಬಾಲೆಯ ದುಃಖವನ್ನು ನನಿಂದ ಪರಿಹರಿಸು ಆಗದು. ಅವಳ ದು;ಖವನ್ನು ಪರಿಹರಿಸು ಇವನೇ ಸಮರ್ಥ. ಆದುದರಿಂದ ಇವನನ್ನು ಹರಿಕೂಟ ಜ್ಯೋತಿರ್ವನದಲ್ಲಿ ಮಲಗಿಸುವೆ' ಎಂದು ಆಲೋಚಿಸಿ ತಂದು ಮಲಗಿಸಿದಳು.

ಬೆಳಗಾಯಿತು, ರಾಜಕುಮಾರನು ನಿದ್ರೆ ತಿಳಿದೆದ್ದನು. ರಾಜಕುಮಾರನಿಗೆ ಸುತ್ತ ಮುತ್ತ ನೋಡಿ ಆಚ್ಚರ್ಯವಾಯಿತ್ತು. ರಾತ್ರಿ ಹರ್ಮ್ಯದಲ್ಲಿ ಮಲಗಿದ್ದ ನಾನು ಈಗ ಈ ಅರ್ರ್ಯಣದಲ್ಲಿ ಮಲಗಿರುವುದೇನಾಶ್ಚರ್ಯ. ನಾನು ವಿದ್ಯಾಧರಿಯರನ್ನು ಮದುವೆಯಾದುದು ನಿಜವೊ ಸುಳೋಎಂದು ಚಿಂತಿಸಿದನು. ಕೈಲಿದ್ದ ಕಂಕಣವನ್ನು ನೋಡಿ ತನಗೆ ಮದುವೆಯಾದುದು ನಿಶ್ಚಯವೆಂದು ಭಾವಿಸಿದನು. 'ಇಲ್ಲಿಗೇಕೆ ಬಂದೆ' ಎಂದು ಲತಾಮಂಟಪದ ಮೃದುತಳ್ಪದಲ್ಲಿದ್ದನು. ಆಗ ಹೆಂಗಸಿನ ರೋದನ ಕೇಳಿಸಿತು.

ರೋದನ ಬಂದೆಡೆಗೆ ಬಂದ ಸನತ್ಕುಮಾರ ಅಲ್ಲಿ ಬಬ್ಬ ಹೆಂಗಸನ್ನು ಕಂಡನು. ನೀನು ಯಾರು? ನಿನ್ನುನ್ನು ಸೆರೆ ತಂದವರು ಯಾರು' ಎಂದು ಪ್ರಶಿಸಿದನು. 'ಅರಸನೆ ಕೇಳು, ನಾನು ಸುನಂದೆ. ಸಕೇತ ನಗರದ ಸುರಥ ಭೂಪನ ಮಗಳು. ತಾಯಿ ತಂದೆಯರು ನನ್ನುನ್ನು

ಹಸಿನಾಪುರದ ಸನತ್ಕುಮಾರನಿಗೆಂದು ಸಾಕಿದಾರೆ. ಇಂದಿಗೆ ಏಳು ದಿನಗಳ ಹಿಂದೆ ಮದನೋದ್ಯಾನದಲ್ಲಿ ಉಯ್ಯಲೆಯಾಡುತ್ತಿದ್ದೆ. ಆಗ ಆಕಾಶದಲ್ಲಿ ಹೋಗೆತ್ತಿದ್ದ ವಜ್ರವೇಗನು ನನ್ನುನ್ನು ನೋಡಿದನು. ರಾಹು ಚಂದ್ರನನ್ನು ಒಯ್ಯುಂತೆ ನನ್ನುನ್ನು ಆಕಾಶಕ್ಕೆ ಎಳೆದೊಯ್ಯು. ನಾನು ಹುಯ್ಯುಲು ಮಾಡಿದೆ . ಏನೂ ಪ್ರಯೋಜನವಾಗಲಿಲ್ಲ. ನಮ್ಮ ಸೈನ್ಯ ಮುಸುಕುದಂತೆ ವೇಗವಾಗಿ ನನ್ನುನ್ನು ಇಲ್ಲಿಗೆ ಎತ್ತಿ ತಂದನು. ನಾನು ಈ ಬಂಧನದಿಂದ ಬಿಡುಗಡೆ ಹೊಂದಿ ತಂದೆ ತಾಯಿ ಯರನ್ನು ಎಂದು ನೋಡುವೆನೋ' ಎಂದು ಹಂಬಲಿಸಿದಳು.

'ಸನತ್ಕುಮಾರನನ್ನು ನೀನು ನೋಡಿದ್ದೀಯ? ' ಎಂದು ರಾಜಕುಮಾರನು ಪ್ರಶಿಸಿದನು.

ಆಗ ಸುನಂದೆ ಹೇಳತೊಡಗಿದಳು 'ನ್ನನ  ತಂದೆ ಮತ್ತು ವಿಶ್ವಸೇನೆ ಸೇಹಿತರು. ಹಸಿನಾಪುರಕ್ಕೆ ನ್ನನ ತಂದೆ ಹೋಗಿದ್ದಾಗೆ ಸನತ್ಕುಮಾರ ಪಟವನ್ನು ಬರೆದು ತಂದರು. ನಾನ್ನು ಅದನ್ನು ಪುನಃ ಪುನಃ ನೋಡಿ ಆ ಪಟದ ರೂಪು ನನ್ನ ಹೃದಯ ದಲ್ಲಿ ನೆಲಸಿದೆ. ಆರೂಪು ನಿಮ್ಮನ್ನೇ ಹೋಲುತ್ತದೆ.'

'ನಾನೆ ಸನತ್ಕುಮಾರ' ರಾಜಕುಮಾರ. ಸನತ್ಕುಮಾರನನ್ನು ಕಂಡು ಸುನಂದೆಗೆ ತುಂಬ ಸಂತೋಶವಾಯಿತು. ಧೈರ್ಯಗೊಂಡಳು. 'ನ್ನನ ಸುಕೃತ ಫಲ ದಿಂದ ನೀವು ಬಂದಿರಿ. ದುಷ್ಟ ಖೇಚರ ತನ್ನ ತಂಗಿಯನ್ನು ಕಾವಲಿಟ್ಟು ಊರಿಗೆ ಹೋದನು. ಆಕೆ ಜಲಕೇಳಿಗೆ ಹೋಗಿದ್ದಾಳೆ. ಅವರು ಬರುವ ಮೊದಲೇ ನೀವು ಇಲ್ಲಿಂದ ಹೊರಟು ಹೋಗಿ'ಯೆಂದು. 'ನಿನ್ನನ್ನು ಕದ್ದು ತಂದವನನ್ನು ಯಮನ ಪುರಕ್ಕೆ ಅಟ್ಟುವೆ'ನೆಂದನು. ಆಗ ಸುನಂದೆಯು 'ವಜ್ರವೇಗನು ಗಗನಗಾಮಿ. ನಿಮಗೆ ಅವನನ್ನು ಕೊಲುವುದು ಕಷ್ಟ' ಎಂದಳು. ಆಕಾಶದ ಪಕ್ಷಿಯನ್ನು ಕೊಲ್ಲುವುದು ಅಸಾಧ್ಯವೆ? ಎಂದು ರಾಜಕುಮಾರ ನಕ್ಕನು.

ಇಬ್ಬರೂ ಮಾತಾಡುತ್ತಿರುವಾಗ ವಜ್ರವೇಗನು  ಆಕಾಶದಲ್ಲಿ ಭೋಯೆನ್ನುತ್ತ ಗರ್ಜಿಸುತ್ತಕ್ರ ಚಪ್ಪಳೆಯಿಕ್ಕುತ್ತ ಎದುರಾದನು. 'ಬಾಲಕಿಯೊಡನೆ ಮಾತಾಡುವವ ರಾರು? ಕನ್ನಿಕೆಯೊಡನೆ ಸಂಧಾನವೆ? ನೀನು ಕೆಟ್ಟೆ' ಯೆಂದು ಸನತ್ಕುಮಾರನನ್ನು ಹೊಡೆದನು. ಹೊಡೆತವನ್ನು ತಪ್ಪಿಸಿಕೊಂಡು 'ಹುಸಳೆಯನ್ನು ಕದ್ದು ತಂದಕ್ಷಣ ನೀನು ಪರಾಕ್ರಮಿಯೆ'ಯೆನ್ನುತ್ತ ವಜ್ರಮುಷ್ಟಿಯಲ್ಲಿ ಗುದ್ದಿ ಕೆಡಗಿದನು. ವಜ್ರವೇಗನ ಶರೀರ ನೆಲಕ್ಕೆ ಉರುಳಿತು. ದೇವತೆಗಳೂ ಆಶ್ಚರ್ಯಗೊಂಡರು.

ಸಂಜೆಯ ಸಮಯ, ಹೆಂಗಸಿನ ಸವಿಪ ಇರುವುದು ಒಳ್ಳೆಯದಲ್ಲವೆಂದು ಹತ್ತಿರದ ಲತಾಮ ಂಟಪಕ್ಕೆ ಗೋದನು. ಜಲಕೇಳಿಯನ್ನು ಮುಗಿಸಿಬಂದ ಸಂಧ್ಯಾವಳಿ ಅಣ್ಣನ ಶವವನ್ನು ಕಂಡುದು;ಖಿಸಿದಳು. ಸುನಂದೆಯನ್ನು ಸವಿಪಿಸಿ 'ಅಣ್ಣನನ್ನು ಕೊಂದವನು ಯಾರು? ಹೇಳುಅವನು ಎಲ್ಲಿಗೆ ಹೋದ' ಎಂದಳು. ಲತಮಂಟಪದಲ್ಲಿ ಮಲಗಿದ್ದವನನ್ನು ಸುನಂದೆ ತೋರಿಸಿದಳು. ಸಿಡಿಲಿನಂತೆ ಘುಡುಘುಡಿಸಿ ಬಂದ ಸಂಧ್ಯವಳಿಗೆಸನತ್ಕುಮಾರನ ರೂಪವನ್ನು ನೋಡಿ ಕೋಪ ಕಾಮವಾಯಿತು. ರಾಜಕುಮಾರನಿಗೆ ತನ್ನ ವಿಲಾಸ ವಿಭ್ರಮವನ್ನು ತೋರಿದಳು. ಏನೂ ಪ್ರಯೋಜನವಾಗಲಿಲ್ಲ. ವಿರಹದಿಂದ ಬೆಂದು ಸುನಂದೆಯಲ್ಲಿಗೆ ಬಂದಳು. ನೀನುನನ್ನ ಸೋದರಿ. ಕಾಮನ ಕಾಟದಿಂದ ನನ್ನ ಜೀವ ನಿಲ್ಲದಾಗಿದೆ. ನನಗೂ ಇವನಿಗೂ ವಿವಾಹವನ್ನು ಮಾಡಿಸು' ಎಂದಳು. ಮೊದ ಮೊದಲು ಸನತ್ಕುಮಾರನು ಒಪ್ಪಲಿಲ್ಲ. ಸುನಂದೆಯು ಒತ್ತಾಯದಿಂದ ಅನುವಡಿಸಿದ ಮದುವೆಯಲ್ಲಿ ವನದೇವತೆಗಳನ್ನು ಸಾಕ್ಷಿಯಾಗಿಟ್ಟುಕೊಂಡು ಸಂಧ್ಯಾವಳಿಯನ್ನು ಮದುವೆಯಾದನ್ನು.

ಇತ್ತ ಅಶನಿವೇಗನು ವಿಹಾರಕ್ಕೆ ಹೋದ ತನ್ನ ಮಗ ವಜ್ರವೇಗನು ಹಿಂದಿರುಗಿ ಬರಲಿಲವೆಂದು ಚಿಂತಿಸಿದನು. ಅವಲೋಕಿನಿ ವಿದ್ಯಯನ್ನು ಕಎರ್ದು 'ಮಗನ ಹಾನಿ ವೃದಿಯನ್ನು ನೋಡಿ ಬಾ'ಯೆಂದು ಹೇಳಿ ಕಳುಹಿಸಿದನು. ಪಾರಿವಾಳದ ರೂಪಿಂದಬಂದ ಅವಲೋಕಿನೀ ವಿದ್ಯವು ವಜ್ರವೇಗನ ಸಾವನ್ನು ತಿಳಿದು ಅಶನಿವೇಗನಿಗೆ ತಿಳಿಸಿಸಿತು. 'ಹಡೆದ ಮಗನು ಬೆಳೆದು ಅಳಿದರೆ

ಅಗಿಕುಂಡದಲ್ಲಿ ನಿಂತು ಬೆಂದು ಮತಿಗೆಟ್ಟುಎರಡು ಕಣ್ಣುಗಳೂ ಹೋದಂತಲ್ಲವೆ?' ಎಂದು ಶೋಕಿಸಿದನು. ಪಾರಿವಾಳದ ರೂಪದಲ್ಲಿ ಬಂದ ಅವಲೋಕಿನಿ ವಿದ್ಯವನ್ನು ನೋಡಿದ ಸಂದ್ಯಾಳಿ'ನನ್ನ ತಂದೆ ಪರಾಕ್ರಮಿ. ಅಸಮ ಬಲ. ನೀವು ಪ್ರಜ್ಞಪ್ತಿ ವಿದ್ಯವನ್ನು ಕೃಕೊಳಿ' ಎಂದಳು. 'ಖೇಚರ ವಿಹಗಗಳನ್ನು ಕೊಲ್ಲುವುದು ಕಷ್ಟವೆ.? ಎಂದು ರಾಜಕುಮಾರನೆಂದರೂ ಬಿಡದೆ ಸಂಧ್ಯಾವಳಿ ಪ್ರಜ್ಞಪ್ತಿ ವಿದ್ಯವನ್ನು ಕೊಟ್ಟಳು.

ಅಶನಿವೇಗನು ಮಗನ ಮರಣದ ದು;ಖದಿಂದ ಚತುರಂಗ ಪರಿವೃತನಾಗಿ ಹೊರಟನು. ಮಗನನ್ನು ಕೊಂದವನನ್ನು ಶಾಕಿನಿ ಡಾಕಿನಿಯರಿಗೆ ಬಲಿಕೊಡುವೆನೆಂದು ನಿಶ್ಚಯಿಸಿದನು. ಇದ್ದಕ್ಕಿದ್ದಂತೆ ಸೈನ್ಯದ ರಭಸವನ್ನು ಕೇಳಿದ ಚಂದ್ರವೇಗ ಆ ವನದ ಹಿಂಭಾಗದಲ್ಲಿ ಬಂದು ನಿಂತು ಅಶನಿವೇಗ–ಸನತ್ಕುಮಾರರ ಕಾಳಗವನ್ನು ನೋಡಿದನು.

ಭಯಂಕರ ಯುದ್ದ ನಡೆಯಿತು.ಖೇಚರ ಅರಸು ಸತ್ತನು. ಆದರೂ ಖೇಚರ ಪಡೆಸನತ್ಕುಮಾರನನ್ನು ಮುತ್ತಿತ್ತು. ಅವರೆಲ್ಲರನೂ ತರಿದಿಟ್ಟಿದನು ರಣರಂಗ ಜವನ ಬೋಜನಶಾಲೆಯಂತಿದ್ದಿತು. ದುಷ್ಟ ಖೇಚರರನ್ನು ಸಂಹರಿಸಿ ವಿಜಯಲಕ್ಷ್ಮಿಯನ್ನು ವರಿಸಿದನು. ರಥಖಢ್ಗಾದಿಗಳನ್ನು ಪ್ರಜ್ಞಪ್ತಿ ವಿದ್ಯಕ್ಕೆ ಒಪ್ಪಿಸಿ ಲತಗೃಹದಲ್ಲಿದ್ದನು.

ಚಂದ್ರವೇಗನು ಲತಾಮಟಂಪಕ್ಕೆ ಬಂದು 'ನೀನು ಕದನ ವಿಕ್ರಮನು'ಯೆನ್ನುತ್ತ ರಾಜಕುಮಾರನನ್ನು ಆಪ್ಪಿಕೊಂಡು .'ನೀನು ಯಾರು ? ಏನು?' ಎಂದು ವಿಚಾರಿ ಸಿದನು. ರಾಜಕುಮಾರನೂ ಚ ಂದ್ರವೇಗನನ್ನು ಪ್ರಶಿಸಿದನು. ಅದಕ್ಕೆ ಉತ್ತರವಾಗಿ ಚಂದ್ರವೇಗನು ಹೇಳಿದನು–'ರಥನೂಪುರವೆಂಬ ಹೆಸರಿನ ಚಕ್ರವಾಳಪುರ. ರಾಜಚಂದ್ರಯಶ.ರಾಣಿ ವಿದ್ಯುದ್ವೇಗೆ. ಅವರಿಗೆ ನಾವು ಇಬ್ಬರು ಮಕ್ಕಳು. ಹಿರಿಯವನು ಚಂದ್ರವೇಗ, ಕಿರಿಯವನು ಭಾನುವೇಗ. ಯುದ್ಧಘೋಷವನ್ನು ಕೇಳಿ ನಾನು ಉತ್ಸುಕನಾಗಿ ಇಲ್ಲಿಗೆ ಬಂದೆ. ನಿನ್ನ ಪರಾಕ್ರಮವನ್ನು ಕಂಡೆ. ನೀನು

ನನ್ನ ನಗರಕ್ಕ ಬರಬೇಕು' ಯೆಂದನು. ರಾಜಕುಮಾರನು ಹೆಂಡತಿಯರೊಡನೆ ಚಂದ್ರವೇಗನ ಪುರಕ್ಕೆ ಬಂದನು.

ಅತ್ತ ಪ್ರಿಯವಂಶ ನಗರದಲ್ಲಿ ಭಾನುವೇಗನ ಸುತೆಯರು ಸನತ್ಕುಮಾರನನ್ನು ಕಾಣದೆ ತಮ್ಮ ತಂದೆಗೆ ತಿಳಿಸಿದರು. ಆ ಜನಪದದಲ್ಲೆಲ್ಲ ಸನತ್ಕುಮಾರನಿಗಾಗಿ ಹುಡುಕಿದರೂ ರಾಜಕುಮಾರ ಕಾಣಲಿಲ್ಲ. ಎಲ್ಲರೂ ಚಿಂತೆಯಿಂದಿದ್ದರು. ಭಾನು ವೇಗನು ನೈಮಿತ್ತಿಕನನ್ನು ಕರೆಸಿ ಪ್ರಶ್ನಿಸಿದನು. ನೈಮಿತ್ತಿಕನು'ನಿನ್ನ ಅಳಿಯನು ಇನ್ನು ಹದಿನೈದು ದಿವಸಗಳಲ್ಲಿ ಬರುತ್ತಾನೆ. ಇದು ತಪ್ಪದು' ಎಂದು ತಿಳಿಸಿದನು.

ಇತ್ತ ರಥನೂಪುರ ಪುರದ ಚಂದ್ರವೇಗನು ತನ್ನ ಕನ್ನೆಯರ ವಿವಾಹಕ್ಕೆ ಪಟ್ಟಣ ವನ್ನು ಶೃಂಗರಿಸಿದನು. ರಾಜರಿಗೆಲ್ಲ ಆಮಂತ್ರಣಗಳು ಹೋದುವು. ಅಣ್ಣನ ರಾಯಸವನ್ನು ನೋಡಿದ ಭಾನುವೇಗನು ರಾಣವಾಸ ಸಹಿತ ಬಂದನು. ಅಲ್ಲಿ ತನ್ನ ಅಳಿಯನನ್ನು ಕಂಡು ಸಿತಯಕ್ಷನೊಡನೆ ನಡೆದ ವಿವರವನ್ನು ಕೇಳಿದನು.

ದೇವತೆಗಳ ಮಧ್ಯದಲ್ಲಿದ್ದ  ಶಕ್ರನಂತಿದ್ದ ರಾಜಕುಮಾರನು ಆನೆಯ ಮೇಲೆ ಬಂದನು. ಬಾಸಿಗ ಸಹಿತ ಮೆಟ್ಟಕ್ಕಿಯಲ್ಲಿ ನಿಂತನು. ಜವನಿಕೆಯನ್ನು ಹಿಡಿದು ರಾಜಕುಮಾರಿಯರನೂ ನಿಲ್ಲಿಸಿದರು. ಶುಭ ಮುಹೂರ್ತದಲ್ಲಿ ಜವನಿಕೆಯನ್ನು ತೆಗೆದರು. ಮನಥನಂತಿದ ರಾಜಕುಮಾರನಿಗೆ ರಾಜಕುಮಾರಿಯರು ಮಾಲೆಗಳನ್ನು ಹಾಕಿದರು. ಜೀನರಿಗೆ ಬೆಲಾವನ್ನು ಹಾಕಿದರು. ಚಂದ್ರವೇಗನು ಕನಕಕಲಶದಿಂದ್ಧ ಧಾರೆಯೆರೆದನು. ಐದೆವೆಣ್ಣುಗಳು ಆರತಿಯನ್ನು ಎತ್ತಿದರು. ಶಿಷ್ಟ ಗುರುಬುಗುಧರುಹರಸಿದರು. ನಾಲ್ಕನೆಯ ದಿನ ನಾಗಬಲಿ ನಡೆಯಿತು. ಆನೆಯ ಮೇಲೆ ಸನತ್ಕುಮಾರನನ್ನು ಮೆರವಣಗೆ ಮಾಡಿದರು. ದೊರೆಗಳು ತಮ್ಮ ನಗರಗಳಿಗೆ ಹೋದರು. ಸನತ್ಕುಮಾರನು ಸುಖವಾಗಿದ್ದನು.

ಹೀಗಿರಲು ಒಂದು ದಿನ ಚಂದ್ರವೇಗನು ಜಿನಗೃಹವನ್ನು ಪರಮ ಭಕಿಯಿಂದ ಹೊಕ್ಕನು. ಈನ ಪೂಜೆ ನಡಸಿ ಚಾರಣ ಗುರುಲಲಾಮ ಸುಮಾಲಿಗಳನ್ನು ಕಂಡು ನಮಸ್ಕರಿಸಿದನು. ಸುಮಾಲಿಗಳು ಹೇಳಿದ ಧರ್ಮಸೂಕ್ಷ್ಮವನ್ನು ತಿಳಿದು ವಿನಯದಿಂದ ಸನತ್ಕುಮಾರ ಮತ್ತು ಸಿತಯಕ್ಷರ ವೈರಕ್ಕೆ ಕಾರಣವೇನು ಎಂದನು. ಮುನೀಂದ್ರ ಹೇಳ ತೊಡಗಿದನು.

'ಮಗಧ ದೇಶದ ರಾಜಧಾನಿ ಕಾಂಚನಪುರ. ಪ್ರಮುಖ ಅಲ್ಲಿನ ಅರಸು ಅವನಿಗೆ ನೂರು ಜನ ರಾಣಿಯರಿದ್ದರು. ಆ ಊರಿನಲ್ಲಿ ನಾಗಚಂದ್ರನೆಂಬ ಶ್ರೀಮಂತ ಬ್ರಾಹ್ಮಣನಿದ್ದನು. ಅವನ ಮಡದಿ ವರಮ್ಮನ್ಮಥನ ಜಯಶ್ರೀಯಂತಿದ್ದ ನಾಗಶ್ರೀ.

ಒಂದು ದಿನ ಪುರವಿಹಾರದಲ್ಲಿದ್ದ ಪ್ರಮುಖನು ಪ್ರಸಾದದ ಮಣಮಾಡದಲ್ಲಿ ನಿಂತಿದ್ದ ವಿಷ್ಣುಶ್ರೀಯನ್ನು ಕಂಡನು. ಅವಳನ್ನು ನೋಡಿದಂದಿನಿಂದ ಮನಥನ ಉಪಟಳಕ್ಕೆ ಒಳಗಾದನು. ಅವಳಿಗಾಗಿ ಹಾರೆಸಿ ಹಂಬಲಿಸಿದನು. ವಿಷಯವನ್ನು ಮುದರಸೇನೇಯೆಂಬ ಕೆಳದಿಗೆ ತಿಳಿಸಿದನು.ಕೆಳದಿ ಉಪಪತಿಯ ಸಂಗತಿಯನ್ನು ತಿಳಿಸಿ ವಿಷ್ಣುಶ್ರೀಯನ್ನು ಒಪಿಸಿದಳು.

ರಾತ್ರಿಯಾಯಿತ್ತು, ವಿಷ್ಣುಶ್ರೀ ಪತಿಯನ್ನು ಹೊಸರತಿ ಪ್ರೌಢಿಮೆಯಲ್ಲಿ ಮೈಮರೆ ಸಿದಳು. ಮನೆಯ ಜನರು ನಿದ್ರೆಯಲ್ಲಿದ್ದರು. ಅಸಿತವಸನವನ್ನುಟ್ಟ ವಿಷ್ಣುಶ್ರೀ ಪ್ರಮುಖನ ಸಜೆವನೆಯನ್ನು ಸೇರಿದಳು. ಸರತಾಪದಿಂದ ಕಂಗಾಲಾಗಿದ್ದ ಪ್ರಮುಖ ವಿಷ್ಣುಶ್ರೀಯೊಡನೆ ಮನದಣವನು ಕೂಡಿದನು.

ಬೆಳಗಾಯಿತು, ಸೂರ್ಯ ಮೂಡಣದಿಗಂತದಲ್ಲಿ ಮೂಡಿದನು. ನಾಗಚಂದ್ರ ನಿಗೆ ಎಚ್ಚವಾಯಿತು ಶಯ್ಯೆಲ್ಲಿ ವಿಷ್ಣು ಶ್ರೀ ಕಾಣಲಿಲ್ಲ. ಸೈಗೆಡೆದ ನಾಗಚಂದ್ರ ಅವಳಿಗಾಗಿ ಹಾರೆಸುತ್ತಿದ್ದನು. ಇತ್ತ ವಿಷ್ಣುಶ್ರೀನಾನಾರತಿಯ ಜಾಣೆಯಲ್ಲಿ ನರಪತಿಯನ್ನು ಒಲಿಸಿದಳು. ಪ್ರಮುಖನೃಪ ಯಾವಾಗಲೂ ವಿಷ್ಣುಶ್ರೀಯಲೇ ಅನುರಕನಾಗಿದ್ದನು.

ಕಾರ್ಮುಗಿಲ ಸಮೂಹವೊ? ಕತ್ತಲೆ ಆನೆಯ ರೂಪತಾಳಿತೊ? ಈಶ್ವರ ನೊಡನೆ ಯುದ್ದ ಮಾಡಿದ ಗಜಾಸುರನೋ? ಎನ್ನುವಂತಿದ್ದ ಆನೆ ಒಂದು ದಿನ ಮದಿಸಿ ಹೊರಜಿಯನ್ನು ಹರಿದು ಬೀದಿ ಬೀದಿಯಲ್ಲಿ ಸುಳಿದು ಉಪಟಳವನ್ನು ಕೊಡುತಿದ್ದಿತು.

ಆ ಆನೆಯನ್ನು ಹಿಡಿಯುವ ಕಾರ್ಯದಲ್ಲಿ ರಾಜನು ತೊಡಗಿರುವಾಗ ಅರಮನೆ ಯಲ್ಲಿ ಅವನ ಮೊದಲ ರಾಣಿಯರು ಈ ರೀತಿ ಯೋಚಿಸಿದರು. 'ಅರಸು ಜಾರಾಂಗನೆಯನೇ ಮೆಚ್ಚಿದಾನೆ.ನಮ್ಮನ್ನು ನೋಡುವುದಿಲ್ಲ, ನುಡಿಸುವುದಿಲ್ಲ. ಆದುದರಿಂದ ವಿಷ್ಣುಶ್ರೀಯನ್ನು ಕೊಲ್ಲಬೇಕು'. ಆ ಹೆಂಗಸರೆಲ್ಲ ಸೇರಿ ವಿಷ್ಣುಶ್ರೀಗೆ ವಿಷಾನ್ನವನ್ನು ಬಡಿಸಿದರು. ವಿಚಾರ ತಿಳಿಯದ ವಿಷ್ಣುಶ್ರೀ ಊಟ ಮಾಡಿ ಅಂತಕನನ್ನು ಕಂಡಳು. 'ಪ್ರಮುಖ ಭೂಪನ ಚಿತ್ತವಲ್ಲಭೆ ಸತ್ತಳು. ಅಯೋ !' ಎಂದು ಹೆಂಗಳ ಮೊತ್ತವಿಷ್ಣುಶ್ರೀಯ ಶವವನ್ನು ಶ್ಮಶಾನಕ್ಕೆ ಹಾಕಿಸಿದರು.

ರಾಜನು ಆನೆಯನ್ನು ಮಲ್ಲಗಂಭದಲ್ಲಿ ಕಟ್ಟಿದನು. ಬಲವನ್ನೆಲಾ ಬೀಳ್ಕೊಟ್ಟು ಅರಮನೆಗೆ ಬಂದನು. ವಿಷ್ಣುಶ್ರೀಯು ಕಣ್ಣಗೆ ಬೀಳಲಿಲ್ಲ. ಪರಿಜರನ್ನು ವಿಚಾರಿ ಸಿದನು, ಹಾವು ಕಡಿದು ಸತ್ತಳೆಂದು ತಿಳಿಸಿದರು. ಫ್ರಮುಖನು ಶೋಕದೇಳ್ಗೆಯಲ್ಲಿ ಮೂರ್ಛೆ ಬಿದ್ದನು. ಎಚ್ಚೆತ್ತು ಸ್ಮಶಾನದಲ್ಲಿ ಕೊಳೆತು ನಾರುತ್ತಿದ್ದ ವಿಷ್ಣುಶ್ರೀಯ ಶವವನ್ನು ಕಂಡು ವೈರಾಗ್ಯ ಹೊಂದಿದನು. ಮಗ ವಿಮಲವಾಹನನಿಗೆ ರಾಜ್ಯಪಟ್ಟವನ್ನು ಕಟ್ಟಿ ಸಂವ್ರತಾಚಾರ್ಯರಲ್ಲಿ ದೀಕ್ಷೆ ತಾಳಿದನು. ಹಲವು ದಿವಸ ತಪಸ್ಸು ಮಾಡಿ ಕರ್ಮಗಳನ್ನು ಸಾಧಿಸಿ ಸಮಾಧಿ ಮರಣವನ್ನು ಹೊಂದಿದನು. ದ್ವಾದಶ ಕಲ್ಪದಲ್ಲಿವಿಂಶತಿ ಸಾಗರೋಪಮ ಆಯುಷ್ಯ ಪಡೆದು ಪ್ರತಿಯಿಂದ್ರನಾಗಿ ಜನಿಸಿದನು.

ಸುರಲೋಕದ ಸುಖಗಳನ್ನು ಅನುಭವಿಸು ಮಗಧದ ಕನಕಪುರ ಹರಿವಾಹನನ ಗೆಳೆಯ ಅರ್ಹದ್ದಾ ಸನಿಗೆ ಜಿನವರ್ಮನಾಗಿ ಹುಟ್ಟಿದನು. ಜಿನವರ್ಮನು ಧರ್ಮವಂತ ನಾಗಿ ಜಿನೃಹಗಳನ್ನು ಮಾಡಿಸಿ ಸುಖವಾಗಿದ್ದನು.

ನಾಗಚಂದ್ರನು ಸತಿಯಲಿದ ದುಃಖದಿಂದ ಸತ್ತು ನಕರ ತಿರ್ಯಂಚಾದಿಗಳಲ್ಲಿ ಅಲೆದನು. ಕಪಿಲನೆಂಬ ಭ್ರಾಹಣ ಮತ್ತು ಗಂಗೆಯರಿಗೆ ಭಾರದ್ವಾಜನೆಂಬ ಹೆಸರಿನ ಮಗನಾಗಿ ಹುಟ್ಟಿದನು. ಕನಕದಂತಿಯೆಂಬ ಸನ್ಯಾಸಿಯ ಶಿಷ್ಯನಾಗಿ ಭೂಮಿಯನೆಲ್ಲಸುತ್ತಿ ಕನಕಪುರಕ್ಕೆ ಬಂದನು. ಹರಿವಾಹನನು ಅವನನ್ನು ಸ್ವಾಗತಿಸಿದನು. ಒಂದು ದಿವಸ ಹರಿವಾಹನನು ಜಿನವರ್ಮನೊಡನೆ ಸನ್ಯಾಸಿಯ ಬಳಿಗೆ ಹೋದನು. ಅವನ ಹರಕೆಹೊತ್ತು ಅರಮನೆಗೆ ಆರೋಗಣಗೆ ಬರಬೇಕೆಂದು ಬೇಡಿದನು. ಜಿನವರ್ಮನ ಬೆನ್ನಿನ ಮೇಲೆಚಿನ್ನದ ಪಾತ್ರೆಯಲ್ಲಿ ಕುದಿಯುವ ಮತ್ತು ಅಜ್ಯಗಳನ್ನು ಬಡಿಸಿ ಉಣಲಿಕ್ಕಿ ದರೆ ತಾನು ಊಟ ಮಾಡುವೆನೆಂದನು, ಅರಸು ಮೌನಂದಿಂದಿದ್ದನು.

ಅರಸನ ಮೌನವನ್ನು ಕಂಡು ಜಿನವರ್ಮ 'ಅರಸನೆ ಅಪ್ಪಣೆಕೊಡು, ನೀನು ಮಾತಿಗೆ ತಪ್ಪಬೇಡು' ಎಂದನು. ಅಂತೆಯೆ ಜಿನವರ್ಮನ ಬೆನ್ನಿನ ಮೇಲೆ ಕನಕ ಪಾತ್ರವನ್ನಿಟ್ಟರು. ಬಡಿಸಿದ ಪರಮಾನ ಮತ್ತು ಅನುಪಮ ಆಹಾರಗಳನ್ನು ತಪಸ್ವಿ ಉಂಡು ತೀಗಿದನು. ಜಿನವರ್ಮನ ಬೆನಿನಿಂದ ಹರಿವಾಣವನನ್ನು ತೆಗೆಯಲು ರಾಜನುಗಾಯವನ್ನು ಕಂಡು 'ಇವನು ತಪಸ್ವಿಯಲ್ಲ ರಾಕ್ಷಸ'ಯೆಂದು ಊರಿನಿಂದ ಹೊಡೆದೋಡಿ ಸಿದನು. ಜಿನವರ್ಮನು 'ಮೊದಲು ನಾನು ಇವನಿಗೆ ಯಾವ ವಿರೋಧವನ್ನು ಮಾಡಿದ್ದೆನೋ ಅದರ ಫಲ ಇದು' ಎಂದು ರಾಕನನ್ನು ಸಂತೈಸಿದನು. ಶರೀರದ ವ್ರಣ ಮಾದ ಮೇಲೆ ಕೃಯೆತ್ತುವೆನೆಂದು ಗಿರಿಯಂತೆ ನಿಂತನು. ಕಾಗೆ ಗೊಗೆಗಳು ಎರಗಿ ಹುಣ್ಣನ್ನು ತೋಡಲು ಸತ್ತನು. ರತ್ತು ಅಚ್ಯುತಕಲ್ಪಕ್ಕೆ ಅಧಿಪತಿಯಾದನು. ದಿವಿಜಲೋಕದ ಸುಖವನ್ನು ಅನುಭವಿಸಿ ಹತ್ತಿನಾಪುರದ ರಾಜನಾಗಿ ಹುಟ್ಟಿದನು. ಅವನೇ ಈ ಸನತ್ಕುಮಾರ. ಚಾರಿತ್ರ್ಯದಲ್ಲಿ ಇವನಿಗೆ ಸಮರಾದರು ಯಾರು ಎಂದನು.

‘ಆ ಪರಿವ್ರಾಜಕನು ಅಚ್ಯುತೇಂದ್ರನನ್ನು ಹೊರುವ ದೇವನಾಗಿ ಹಿಟ್ಟಿದನು. ಆ ಪದವಿಯಿಂದ ಪತಿತನಾಗಿ ಹಲವು ರೂಪಗಳನ್ನು ಪಡೆದು ನಾಲ್ಕುಗತಿಯಲ್ಲಿ ತಿರುಗಿದನು. ಅಂಜನಗಿರಿಯ ವಶಿಷ್ಟಮತ್ತು ಪೂಕೆಯರಿಗೆ ಜನಿಸಿದನು. ಅವನು ತಾಪಸ ತಪಸ್ಸನ್ನು ಮಾಡದೆ. ಸತ್ತು ಕ್ಷುಲ್ಲಕ ಸರಸಿಯಲ್ಲಿ ಅಸಿತಾಕ್ಷನಾಗಿ ಜನಿಸಿದನು.’ ಎಂದು ಮುನಿಗಳು ತಿಳಿಸಿದರು.

ಸನತ್ಕುಮಾರ–ಅಸಿತಾಕ್ಷರ ಜನಾಂತರದ ವಿವರವನ್ನು ತಿಳಿದು ಚಂದ್ರವೇಗ ಮತ್ತು ಅವನ ಪರಿವಾರ ಗುರು ಸುಮಾಲಿಗಳ ಪಾದಕ್ಕೆ ನಮಸ್ಕರಿಸಿ ನಗರಕ್ಕೆ ಹಿಂದಿರುಗಿದರು.

‘ಎಲೈ, ಮಹೇಂದ್ರಭೂಪಾಲನೆ, ಸನತ್ಕುಮಾರನಿಗೆ ನಮ್ಮ ರಾಜರುವೊಲಿದು ತಮ್ಮ ತಮ್ಮ ಕುಮಾರಿಯರನ್ನು ಕೊಡಲು ಸನತ್ಕುಮಾರನು ಸ್ವೀಕರಿಸಿದ’ನೆಂದು ವಿಪುಲಶ್ರೀ ತಿಳಿಸಿದಳು. ಈ ಎಲ್ಲ ವಿಚಾರವನ್ನು ತಿಳಿಸುವಷ್ಟರಲ್ಲಿ ಸೂರ್ಯನು ಅಸ್ತಾಚಲದ ಶಿಖರಾಗ್ರದಲ್ಲಿ ಮೈಯಿಕ್ಕಿದನು.

ಳ

ಧರಣಿಯನ್ನು ಬೆಳಗುವ ಸೂರ್ಯನೇ ಬಾಯೆಂದು ಕೋಳಿಗಳು ಕೂಗಿದುವು. ದಿನಕರನು ಮೂಡುವೆಣ್ಣಿನ ಹಣಯ ಚಂದಿರವಟ್ಟಿನಂತೆಸೆದನು. ಅಂಬರಚರಿಯರು ವಿವಿಧ ವಾದ್ಯಗಳೊಡನೆ, ವಿವಿಧ ರಾಗದಲ್ಲಿ ಸುಭಾತವನ್ನು ಹಾಡಿದರು. ಸನತ್ಕುಅಮಾರನು ಜಿನಧ್ಯಾನ ಮಾಡುತ್ತಾಯೆದ್ದನು. ಪಾತ್ರರ್ವಿಧಿಗಳನ್ನು ತೀರಿಸಿ ಒಲಗ ದಲ್ಲಿದ್ದನು. ಮಹೇಂದ್ರಸಿಂಹನು. ಒಲಗಕ್ಕೆ ಬಂದು ಸನತ್ಕುಮಾರನ ತಾಯಿ ತಂದೆ ಯರ ಇವರನ್ನು ತಿಳಿಸಿದನು. ಕುಮಾರನನ್ನು ನಗರಕ್ಕೆ ಹಿಂದಿರುಗಿವಂತೆ ಬೇಡಿದನು.

ಸನತ್ಕುಮಾರ ಮಾವಂದಿರ ಸಭೆಯನ್ನು ಹೊಕ್ಕನು. ಅವರು ಏನೆಂದು ವಿಚಾರಿಸಿದರು. ತಾಯಿ ತಂದೆಗಳನ್ನು ಕಾಣುವ ಇಚ್ಛೆಯನ್ನು ಕುಮಾರನು ಮಾವನಿಗೆ ತಿಳಿಸಿದನು. ಅಳಿಯ ಮತ್ತು ಹೆಣುಮಕ್ಕಳನ್ನು ವಿವಿಧ ವಸ್ತ್ರಾಭರಣಗಳೊಂದಿಗೆ ಬೀಳುಕೊಟ್ಟರು. ತಾರಾಪಥದಲ್ಲಿ ಕುಮಾರನು ಪಯಣ ಹೊರಟನು. ಮಾರ್ಗ ಮಧ್ಯೆ ಅನೇಕ ಅರಸನು ಒಂದು ಸನತ್ಕುಮಾರನನ್ನು ಕಂಡರು.ಅವನು ಅವರನ್ನೆಲ್ಲ ಮನ್ನಿಸಿ ಕಳಿಸಿದನು. ಭಾಗ್ಯಲಕ್ಷ್ಮಿ ಯ ಚಿತ್ರವನ್ನು ಸೆರೆಗೊಂಡವನಂತೆ ಸನತ್ಕುಮಾರ ನೃಪನು ಕಂಡನು. 'ತನ್ನ ಬರವನ್ನು ತಂದೆಗೆ ತಿಳಿಸೆಂ'ಗೆಳೆಯನನ್ನು ಕಳಿಸಿದನು.

'ಸನತ್ಕುಮಾರನೆಲ್ಲಿರುವನೋ? ಮಹೇಂದ್ರಸಿಂಹನೆಲ್ಲಿರುವನೋ?' ಎಂದು ರಾಜನು ಯೋಚಿಸುತ್ತಿರುವಾಗ ಮಹೇಂದ್ರಸಿಂಹನು ಬಂದನು. ಅರಸುನು ಸನತ್ಕುಮಾರನ ರಾಯಸವನ್ನು ಓದಿಸಿ ಕೇಳಿದನು. 'ಪೊಡವಿ ಬೆಸಲಾದಂತೆ ರಾಯರ ಗಡಣ ಸಹ' ಬರುತ್ತಿರುವನೆಂದು ಕೇಳಿ ಆನಂದ ಭೇರಿಯಾನು ಹೊಡೆಸಿದನು. ಪುರ ಅಲಂಕಾರ ಗೊಂಡಿತು. ಕುಮಾರನು ತಂದೆಯನ್ನು ಕಂಡಕೂಡಲೆ ರಥದಿಂದಿಳಿದು ನಮಸ್ಕ ರಿಸಿದನು. ತಂದೆ–ಮಕ್ಕಳು ಬಬ್ಬರು ಅಪ್ಪಿದರು. ರವಿ–ವನಜಗಳು ಅಪ್ಪಿದಂತಾಯಿತು. ಆನಂದಬಾಷ್ಪ ಸುರಿಯಿತು. ಮಗನನ್ನು ಸಿಂಹಾಸನದಲ್ಲಿ ಕುಳಿರಿಸಿ ಪಟ್ಟವನ್ನು ಕಟ್ಟಿದನು. ಮಹೇಂದ್ರಸಿಂಹನಿಗೆ ಸಾಮಂತ ಪದವಿಯನ್ನು ಕೊಟ್ಟನು.

ಸುನಂದೆ–ಸನತ್ಕುಮಾರರ ವಿವಾಹ ನಡೆಸಲು ವಿಶ್ವಸೇನನು ನಿಶ್ಚಯಿಸಿದನು . ಸುರಥನಿಗೆ ರಾಯಸವನ್ನು ಕಳಿಸಿದನು. ಸುರಥನು ಸತಿಸುತ ಬಂಧುಜನ ಸಹಿತ ಚತುರಂಗ ಬಲದೊಡನೆ ಹಸ್ತಿನಾನಗರಕ್ಕೆ ಬಂದನು. ಸುನಂದೆಯುನ್ನು ಕಂಡು ಎಲ್ಲ ಸಂಗತಿಯಾನ್ನೂ ತಿಳಿದನು.

ಲಗ್ನಕಾಲ ಸಮಿಪಿಸಿತು. ಲೋಲನೇತ್ರೆ ಸುನೆಂದೆಯನ್ನು ಶೃಂಗರಿಸಿದರು. ಸಖಿಯರೊಡೆನೆ ಸುನಂದ ಹಸೆವಣಗೆ ಬಂದು ನಿಂತುಳು ಸ್ಥಿರ ಮೂಹೂರ್ತದಲ್ಲಿ ಅಗಿಸಾಕ್ಷಿಯೊಡನೆ ಸುನಂದೆ ಮಗಳನ್ನು ಸನತ್ಕುಮಾರನಿಗೆ ಧಾರೆಯೆರೆದು ಕೊಟ್ಟನು. ಸನತ್ಕುಮಾರ–ಸುನಂದಾ ವಿವಾಹ

ಸಂಬಧವಾಗಿ ಉತ್ಸವಗಳ ಮೇಲೆ ಉತ್ಸವಗಳು ನಡೆದುವು. ನಾಲ್ಕುನೆಂನೆಯ ದಿವಸ ನಾಗವಲಿ ನಡೆಯಿತು. ಭಿಕ್ಷುಕರು ಮಣ ಕನಕವಸ್ತ್ರಳನ್ನು ಪಡೆದು ತೃಪ್ತಿಪಟ್ಟರು. ವಿವಾಹ ಸಂಬಧವಾಗಿ ಭೊರಿಬೋಜನ ನಡೆಯಿತು. ಭೂವರರು ಮನದಣಿಯ ಊಟ ಮಾಡಿದರು. ಹೊಟ್ಟೆ ತುಂಬಿತು.ನಾಲಗೆ ತೃಪ್ತಿಗೊಂಡಿತು. ಚಿತ್ತನಲಿಯಿತು. ವಿಶ್ವಸೇನನು ಅನಂತರ ರಾಜರನ್ನು ಸತ್ಕರಿಸಿ ಭೀಳುಕೊಟ್ಟನು. ಸುರಥನು ಮಗಳಿಗೆ ನೂರಾರು ಜನ ಕೆಳದಿಯರನ್ನು. ರತಾಭರಣ ವಸ್ತ್ರಗಳನ್ನು ಕೊಟ್ಟು ಸಾಕೇತಪುರಕ್ಕೆ ತೆರಳಿದನು.

ವಿಶ್ವಸೇನನಿಗೆ ಮುಪ್ಪಡರಿತು. ವೈರಾಗ್ಯಮನನಾದನು. ಮಗನನ್ನು ಕರೆದು ರಾಜ್ಯಭಾರವನ್ನು ಒಪ್ಪಿಸಿದನು. ಚಾರಣಗುರು ಸುದತ್ತಾಚಾರ್ಯರಲ್ಲಿ ಜಿನದೀಕ್ಷಯನ್ನು ಪಡೆದನು. ಹಲವು ಕಾಲತಪಸ್ಸನ್ನಾಚರಿಸಿದನು. ಕರ್ಮಗಳನ್ನು ಖಂಡಿಸಿ ಮಹೇಂದ್ರಕಲ್ಪದಲ್ಲಿ ದೇವನಾಗಿ ನೆಲಸಿದನು.

ಜ

ಸನತ್ಕುಮಾರನು ಅದ್ವಿತೀಯನಾಗಿ ರಾಜ್ಯಭಾರ ಮಾಡಿದನು. ಅವನ ರಾಜ್ಯದಲ್ಲಿ ಜಿನಪದ ಭಕ್ತಿ. ಸುಖ. ಶಾಂತಿ ನೆಲಸಿತು.ದಿಕ್ಕುದಿಕ್ಕುಗಳಿಂದಲೂ ಕಪ್ಪಕಾಣಕೆಗಳನ್ನು ತರಿಸಿ ಕೊಂಡನು. ಎಲ್ಲ ರಾಜರು ಸನತ್ಕುಮಾರನನ್ನು ಒಲೈಸುತ್ತಿದ್ದರು. ಚಕ್ರವೇ ಮೊದಲಾದ ಹದಿನಾಲ್ಕು ನಿರ್ಜಿವ ಸಜೀವರತಗಳು ಜನಿಸಿದುವು. ತೊಂಬತ್ತಾರು ಸಾವಿರ ಜನ ಸ್ತ್ರೀ ಯರೊಡೆನೆ ಸನತ್ಕುಮಾರನು ಮೆರೆದನು.

ಒಂದು ದಿನ ಸೌಧರ್ಮೆಂದ್ರನು ಮೊದಲ ಕಲದಲ್ಲಿ ಒಡ್ಡೋಲಗಕೊಟ್ಟಿದ್ದನು. ಸುರರು ವಿಧ್ಯಾದರರು ಯಕ್ಷರೇ ಮೊದಲಾದ ದೇವತಾ ಸಮೂಹ ಅಲ್ಲಿದ್ದಿತು. ನಾರದ ತುಂಬರರು ಹಾಡುತ್ತಿದ್ದರು. ಊರ್ವಶಿ ತಿಲೋತ್ತಮೆ ರಂಭೆಯರು ಸೌದಾಮಿನಿಯೆಂಬ ನಾಟಕವನ್ನು

ಆಡುತ್ತಿದ್ದರು. ಆಗ ಸಹಸೋತನ್ನನೆಂಬ ದೇವತೆ ಇಂದ್ರನ ಸಭೆಗೆ ಬಂದನು. ಅವನು ಬಂದುದರಿಂದ್ ದೇವತೆಗಳು ಚಂದ್ರನೆದುರಿನ ನಕ್ಷತ್ರಗಳಂತಾದರು. ಅಚ್ಚಗೊಂಡ ಸಭಿಕರು 'ದೇವ,ಸಹಸೋತನ್ನ ಸಂಗಮ ದೇವನಿಗೆ ಈ ಚೆಲುವು, ಲಾವಣ್ಯ. ವಿಭ್ರಮ ಹೇಗೆ ದೊರೆಯಿತು? ನಮಗೆ ತಿಳಿಸಿ'ಎಂದು ಇಂದ್ರನನ್ನು ಕೇಳಿದರು.

ಇಂದ್ರನು ತಿಳಿಸಲು ಮೊದಲು ಮಾಡಿದನು. 'ಪುಂಡರೀಕಿಣಪುರದ ಅರಸು ಸಕಲ ಚಕಿ ಲಕ್ಷೀಮತಿ ಅವನ ರಾಣಿ. ಕ್ಷೀರಕುಮಾರನೆಂಬುವನು ಅವರ ಮಗ.ಬಾಲ್ಯದಿಂದಲೂ ಜಿನೆವಂದೆನೆ. ಗುರುಭಕಿ ,ಆಗಮ್ಮರಸ್ಯಗಳಲ್ಲಿ ತಲ್ಲೀನನಾಗಿದ್ದನು. ದಿನ ದಿನಕ್ಕೆ ಅವನಿಗೆ ವೈರಾಗ್ಯವುಂಟಾಗಿ ತಾನು ಮುನಿಯಾಗುವೆನೆಂದನು. ತಾಯಿ ಒಪ್ಪಲಿಲ್ಲ. ಮನೆಯಲೇ ಬ್ರಹವ್ರತವನ್ನು ತಾಳಿ,ಶ್ರಾವಕ ಕ್ರಮದಿಂದ ನಡೆದುಕೊಂಡನು. ವೀರಜಿನೇಂದ್ರನೋಪಿಯನ್ನು ಹನ್ನೆರಡು ವರುಷ ನಡೆಸಿದನು. ಅದರ ಫಲ ಈ ಸೊಬಗು ಸೌಂದರ್ಯ

ಈ ವಿವರವನ್ನು ಕೇಳಿದ ಸುದರ್ಮರು ಪ್ರಶಿಸಿದರು. 'ಮೇಲೆನಿಸುವ ಈ ರೂಪು ವಿಲಾಸ ವಿಭ್ರಮಗಳನ್ನು ಪಡೆದವರು ಬೇರೆಯವರಿರುವರೇ ?'

ಇಂದ್ರನು ಹೇಳಿದನು. 'ಕುರುಜಾಂಗಣದ ಹಸ್ತಿನಾ ನಗರದ ಅರಸು ಸನತ್ಕುಮಾರ ಸೌಂದರ್ಯ ದೆವತೆಗಳ ಸೌಂದರ್ಯಕ್ಕಿಂತ ಮಿಗಿಲು.'

ವಿಜಯ–ವೈಜಯರೆಂಬ ದೇವತೆಗಳು ಈ ಮಾತನ್ನು ಪರೀಕ್ಷಿಸು ಹಸಿ ನಗರಕ್ಕೆ ಬಂದರು. ಮನುಷ್ಯವೇಶದಲ್ಲಿದ್ದ ಅವರು ದ್ವಾರಪಾಲಕರ ಮೂಲಕ ತಮ್ಮ ಬರವನ್ನು ರಾಜನಿಗೆ ತಿಳಿಸಿದರು. ಆಗ ರಾಜನು ಅಭ್ಯಂಜನದ ಸಿದ್ದತೆಯಲ್ಲಿದ್ದನು. ಆದರೂ ದೇವತೆಗಳನ್ನು ಬಹೇಳಿದನು. ತ್ರುಲಲೇಪಿತ ಸನತ್ಕುಮಾರನ ಶರೀರವನ್ನು ದೇವತೆಗಳು ನೋಡಿ ಸ್ತಂಭಿಭೂತರಾದರು. ನಾವು ಈಚೆಲುವಿಕೆ

ಯನ್ನು ಸುರನರೋರಗರಲ್ಲಿ ಕಾಣವು. ಮನುಷ್ಯನಿಗೆ ಈ ಬಗೆಯ ಲಾವಣ್ಯ, ವಿಭ್ರಮ, ತೇಜಸ್ಸು ಅಚ್ಚರಿಯೆಂದು ತಲೆದೊಗುತ್ತಿದ್ದರು. ಅರಸನು ದೇವತೆಗಳನ್ನು ಎಲ್ಲಿಂದ ಬಂದಿರಿಯೆಂದು ಪ್ರಶಿಸಿದನು. 'ದೇವಲೋಕದಿಂದ ಬಂದೆವು. ಎಂದ ಅವರು ಅಲ್ಲಿ ನಡೆದು ಸಂಗತಿಯನ್ನು ವರ್ಣಿಸಿದರು. ಹಾಗಾದರೆ ಬೇಗ ಮಜ್ಜನ ಮಾಡಿ ಆ ಸ್ಥಾನಕ್ಕೆ ಬರುತ್ತೇನೆ. ಆಲ್ಲಿ ನೀವು ನನ್ನ ರೂಪವನ್ನು ನೋಡಿ ಹೋಗಿರಿ'ಯೆಂದು.

ಆ ದೇವತೆಗಳು ರಾಜನ ಮಾತಿಗೆ ಒಪ್ಪಿ ಆ ಸ್ಥಾನಕ್ಕೆ ಬಂದರು. ಸರ್ವಾಲಂಕಾರ ಭೂಷಿತನಗಿ ರಾಜನು ಸಿಂಹಾಸನದಲ್ಲಿ ಮಂಡಿಸಿದನು. ಅಲ್ಲಿ ಸಮಸ್ತ ಸಾಮಂತ, ಮಹಾಸಾಮಂತರು ನೆರೆದಿದ್ದರು. ಸಚಿವರು ಮೂವತ್ತೆರಡು ಸಾವಿರ ಮಕುಟ ಬದ್ದರು ಕೈಮುಗಿದಿದ್ದರು. ಖೇಚರಿಯರು ಸನತ್ಕುಮಾರನನ್ನು ಬಳಸಿದ್ದರು. ಮೂವತ್ತೆರಡು ವಿದ್ಯಾಧರ ಕುಮಾರಿಯರು ಎಡಬಲದಲ್ಲಿ ಚಾವರವನ್ನು ಬೀಸುತ್ತಿದ್ದರು. ಸನತ್ಕುಮಾರನು ಸೌಧರ್ಮೇಂದ್ರನಂತೆ ಮೆರೆದನು.

'ನನ್ನ ರೂಪವನ್ನು ನೀವು ಆಗ ನೋಡಿದಿರಿ. ಈಗ ವಸ್ತ್ರಭರಣ ಭೂಷಿತ ನಾಗಿ ರಂಜಿಸುವ ಈ ಚೆಲುವಿಕೆಯನ್ನು ನೋಡಿರಿ' ಸನತ್ಕುಮಾರನೆಂದು.

ದೇವತೆಗಳು ಸನತ್ಕುಮಾರನ ಶರೀರವನ್ನು ಚೆನ್ನಾಗಿ ನಿಟ್ಟಿಸಿ ನೋಡಿ ಆಶ್ಚರ್ಯದಿಂದ 'ಅಯ್ಯೋ ಹೀಗಾಗಬಹುದೇ ?'ಯೆಂದರು. ಸನತ್ಕುಮಾರನು 'ನ್ನನ ಮೊದಲಿನ ರೂಪವನ್ನು ಹೊಗಳ್ಲಿ ದಿರಿ. ಈಗ ದುಗುಡವೇಕೆ ?'ಯೆಂದನು. 'ದೇವತೆಗಳು ಸೊಗಯಿಪ ಅವಯವಗಳ ಚೆಲ್ವಿಕೆತಗ್ಗಿದುವು'ಯೆಂದು. 'ಕ್ಷಣ ಮಾತ್ರದಲ್ಲಿ ತಗ್ಗಿತೆ ?' ಎಂದನು ಸನತ್ಕುಮಾರ.

ಈ ಮಾತಿಗೆ ವಿಜಯ–ವೃಜಯರು 'ನರರಾ ಅಯಸ್ಸು ದಿನೇದಿನೇ ಕುಂದುತ್ತೆದೆ. ಅವರ ಮರಣ ಸವಿಪವಾದಂತೆ ತವುಕಾಂತಿ, ಮನದ ಬುದ್ದಿ ಅಡಗುತ್ತವೆ. ನಿನ್ನ ಬಾಳಿಕೆ ಇನ್ನು ಆರು

ತಿಂಗಳು' ಎಂದು ಹೇಳಿದರು. 'ನೀವು ಇದನ್ನು ಹೇಗೆ ಅರಿತಿರಿ ?'ಯೆಂದು ಅರಸನು ಕೇಳಿದನು. ರಾಜನೆ ಕೇಳು, 'ನಾವು ಅವಧಿಜಾನದಿಂದ ಇದನ್ನು ತಿಳಿದಿದ್ದೇವೆ. ಇದಕ್ಕೆ ದೃಷ್ಟಾಂತವನ್ನು ನೋಡ' ಯೆಂದು ನೀರು ತುಂಬಿದ ದಪ್ಪ ಮಡಕೆಯಾಲ್ಲಿ ಚಾಮರವನ್ನು ಅದ್ದಿ ಬೀಸಿದರು. ಆ ಸಭೆಯಲ್ಲೆಲ್ಲಾ ನೀರಹನಿ ತುಂಬಿತು. ಆಗ ದೇವತೆಗಳು 'ಈ ಸಭೆಯಲ್ಲೆಲ್ಲ ನೀರಹನಿ ತುಂಬಿದೆ. ಚಾಮರದಲ್ಲಿಯೂ ಎಷ್ಟೊ ಉಳಿದಿದೆ. ಮಡಕೆಯಲ್ಲಿಯೂ ನಮಗೆ ತಿಳಿಯದಂತೆ ನೀರು ಕಡಿಮೆಯಾಗಿದೆ. ಹೀಗೆ ನರರಿಗೆ ತಿಳಿಯದಂತೆ ಅವರ ಆಯಸ್ಸು ಕಡಿಮೆಯಾಗುತ್ತದೆ'ಯೆಂದು ಹೇಳಿ ದೇವಲೋಕಕ್ಕೆ ಹೋದರ

ಈ ಪ್ರಸಂಗದಿಂದ ರಾಜನಿಗೆ ವೈರಾಗ್ಯ ಮೂಡಿತು. ತನ್ನ ಮಗ ವಿಜಯ ಕುಮಾರನನ್ನುಕೂಡಿಸಿ ಕೊಂಡು ಹಲವು ರೀತಿಯಲ್ಲಿ ನೀತಿಬೋಧೆ, ರಾಜಧರ್ಮ, ಪ್ರಜಾಪಾಲನರೀತಿಗಳನ್ನು ತಿಳಿಸಿದನು. ಕುಮಾರನಿಗೆ ಪಟ್ಟಕಟ್ಟಿ ಹಲವು ಅರಸರೊಡನೆ ವಿನಯಂಧರಾಚಾರ್ಯರಲ್ಲಿ ಧೃಢಚಿತ್ತದಿಂದ ದೀಕ್ಷೆಪಡೆದು ಯತಿರಾಜ ತೇಜದಲ್ಲಿ ಮೆರೆದನು.

ಧೀಕ್ಷೆಯನ್ನು ಸ್ವೀಕರಿಸಿದ ರಾಜ ಮೂರುದಿವಸ ತಪಸ್ಸು ಮಾಡಿದನು. ನಾಲ್ಕನೆಯ ದಿವಸ ಶರೀರ ಧಾರಣಾರ್ಥವಾಗಿ ಚರಿಗೆಗೆ ಹೊರಟನು, ದಾರಿಯಲ್ಲಿ ಬಡ ಹೆಂಗುಸೊಬ್ಬಳು ಸನತ್ಕುಮಾರನನ್ನು ತಡೆದು ನಿಲ್ಲಿಸಿದಳು. ಮನೆಯಲ್ಲಿದ್ದ ಅವರೆ, ಎಣ್ಣ ಮತ್ತು ಹಾರಕದ ಓಗರವನ್ನು ಫ್ರೀತಿಯಿಂದ ಕೊಟ್ಟುಳು. ಅಮೃತವನ್ನು ಸವಿವಂತೆ ಸವಿದ ರಾಜ ಮೂರು ರಾತ್ರಿಗೆ ಪ್ರತ್ಯಾಖ್ಯಾನವನ್ನು ಪಡೆದನು.ಉಷ್ಣಾಹಾರವನ್ನು ಸೇವಿಸಿದ ಮುನಿಗೆ ಖಾಸ ಶ್ವಾಸ ಕಜ್ಜಿ ಜ್ವರ ಉನತ್ತ ಅಕ್ಷಿ ಕುಕ್ಷಿ ವ್ಯಾಧಿಗಳೆ ಮೊದಲಾದ ಏಳನೂರು ರೋಗಗಳುಂಟಾದುವು. ಆ ರೋಗಗಳನ್ನು ಲೆಕ್ಕಿಸದೆ ಅತ್ಯಂತ ಕಠಿಣವಾದ ತಪಸ್ಸುಮಾಡಿದನು. ರತತ್ರಾಯವನ್ನು ಸಾಧಿಸಿದನು.ಆತಧ್ಯಾನ ಮಾಡಿದನು. ಸಂಸಾರಾಸುರನನ್ನು ಗೆದ್ದನು. ರಾಗದೇಷಗಳನ್ನು ಕಳೆದನು. ಮೊಕ್ಷಂಗನೆಯನೊಲ್ಲಿಸುವ

ಸಿಂಗಗರದ ವಾಯಕನಂತಿದ್ದನು. ಏಳು ತಪಗಳಿಗೆ ಆಶ್ರಯನಾಗಿ, ಋದಿಗಳನು ಪಡೆದು,ಪಾಪ ನಿರ್ಮೂಲನ ಮಾಡಿ ಸನತ್ಕುಮಾರನಿದ್ದನು.

ಎಂದಿನಂತೆ ಒಡ್ಡೋಲದಲ್ಲಿದ್ದ ಇಂದ್ರನು ಮುನಿಗಳ ವಿಚಾರವನ್ನು ತಿಳಿಸುತ್ತ ಸನತ್ಕುಮಾರನು ವ್ಯಾದಿಗ್ರಸ್ತಾನಗಿ ತಪಸ್ಸು ಮಾಡುತ್ತಿರುವ ವಿಚಾರವನ್ನು ತಿಳಿಸಿದನು.

ವಿಜಯ –ವೈಜಯರು ಸುಪರನ ಮಾತು ಸುಳೊ–ನಿಜವೊಯೆಂಬುದನ್ನು ಪರೀಕ್ಷಿಸಬಯಸಿದರು. ಅವರು ವಿವಿಧ ರಸ ಲೇಹ್ಯ ಘುಟಿಕಾ ಭರಣಗಳ ಸಹಿತ ವೃದ್ಯವೇಷದಿಂದ ಸನತ್ಕುಮಾರ ಬಳಿ ಬಂದರು.

ವಿಜಯ –ವೈಜಯರು ಭಕ್ತಿಪೂರ್ವಕವಾಗಿ ಸನತ್ಕುಮಾರ ಮುನಿಗೆ ನಮಸ್ಕರಿಸಿದರು. ಯೋಗ ಸಮಾಧಿ ಚಿತ್ತವನ್ನಳಿದ ಸಮತ್ಕುಮಾರ ಪ್ರೀತಿಯಿಂದ ಹರಸಿದನು. ‘ಯಾವ ದಾರಿಯವರು ? ಎಲ್ಲಿಂದ ಬಂದಿರಿ? ಬಂದುದೆಕೆ’ಯೆಂದು ಕೇಳಿದನು. ದೇವತೆಗಳು ಎಲ್ಲ ಔಷದಗಳನ್ನು ಮುನಿಯ ಮುಂದೆ ಹರಡಿದರು. ‘ನಾವು ಸಮರ್ಥವೈದ್ಯರು, ನೀವು ವ್ಯಾಧಿಗ್ರಸ್ತೆಂದು ತಿಳಿದು ಬಂದಿದ್ದೇವೆ. ನಿಮ್ಮನ್ನು ಉಪಚರಿಸಿ ಗುಣಪಡಿಸುತ್ತೇವೆ’ಯೆಂದರು.

ಸನತ್ಕುಮಾರ ಮುನಿಯೆಂದನು ‘ನೀವು ಭೂಲೋಕಕ್ಕೆ ಸಮರ್ಥರಾದ ವೈದ್ಯರು. ಎಲ್ಲ ಮದ್ದನ್ನು, ಶಾಸ್ತ್ರವನ್ನು ಸದಿಸಿದ್ದೀರಿ. ಆದರೆ ವಾಸಿಯಾಗಿಯೂ ಆಗದ ರೋಗವೊಂದುಂಟು ಅದಕ್ಕೆ ಮದ್ದು. ನಿಮ್ಮಲ್ಲಿ ಉಂಟೆ? ಎಂದನು. ‘ದೇವ. ತಾವು ಹೇಳಿದ ರೋಗ ಯಾವುದು?’ ಎಂದು ದೇವತೆಗಳು ಕೇಲ್ಲಿದರು. ‘ಹುಟ್ಟಿ, ಸಾಯುವ ರೋಗ ಎಲ್ಲರನೂ ಬಾಧಿಸುತ್ತಿದೆ. ಈ ರೋಗಕ್ಕೆ ಯಾವ ಮದ್ದು ತಿಳಿಸಿ’ಯೆಂದು ಮಂದಹಾಸವನ್ನು ಬೀರಿದನು

ದೇವತೆಗಳು ‘ಮುನಿಯೆ, ನಮ್ಮಲ್ಲಿ ಆ ರೋಗಕ್ಕೆ ಔಷದವುಂಟೆ? ಘನಮಹಿಮ ನಾದ ನಿನ್ನಲ್ಲಿಯೇ ಆ ಔಷಧಿ ಇದೆ. ಎಂದರು. ಈ ಮಾತು ಕೇಳಿ ನಗುಗ ಆಯತಿಯ ಬಾಯಿಂದ ಕಫಕಣಗಳನ್ನು ಸಿಡಿದುವು. ‘ಕಫ ಬಿದ್ದ ಮುನಿಯ ಶರೀರದ ವ್ರಣವನ್ನು ಪರಿಹರಿಸುವೆವೆಂದ ನಮ್ಮಅಹಂಕಾರ ಸುಡಲಿ’.ಯೆಂದು ಅವರು ಯತಿಗೆ ನಮಸ್ಕರಿಸಿದರು ‘ನಿನ್ನ ತಪಸ್ಸು ಮೂರು ಲೋಕಗಲ್ಲಿಗೂ ಅತಿಶಯವಾದುದು. ಇಂದ್ರನ ಆ ಸ್ಥಾನದಲ್ಲಿ ನಿನ್ನ ತಪದ ಮಹಿಮೆಯನ್ನು ಕೇಳಿದ ನಾವು ಮೊದಲಿನಂತೆ ನ್ನಿನ ಪಾದದರ್ಶನಕ್ಕೆ ಬಂದೆವು.ಎಂದು ವಿಜಯ ವೈಜಯರು ನಮಸ್ಕರಿಸಿದರು. ಮುನಿಯ ಅಪ್ಪಣೆ ಪಡೆದು ದೇವಲೋಕಕ್ಕೆ ಅವರು ತೆರಳಿದರು.

ಸನತ್ಕುಮಾರ ಮುನಿ ವನದಲ್ಲಿ ಮದುರಹಿತನಾದನು. ಕಾಂಕ್ಷಿಗಳನ್ನು ಗೆದ್ದು ಕಷಾಯವನ್ನು ನಿಗ್ರಹಿಸಿದನು. ಶಂಕೆ ವಿಷಯಗಳನ್ನು ನಾಶಮಾಡಿ ರಾಗದ್ವೇಷಗಳನ್ನು ಸದೆದನು. ನಾಲ್ಕುವಿಧವಾದ ಶತ್ರುಗಳನ್ನು ಅಟ್ಟಿದನು. ಘಾತಿಚುತುಷಯಗಳು ಸಡಿಲಿದಿವು. ಮುನಿಯ  ಸ್ಥೂಲ ಶರೀರ ಲಘುವಾಗಿ ಆಕಾಶದಲ್ಲಿದ್ದಿತ್ತು ಇದನ್ನು ತಿಳಿದ ಅಮರನಾಯಕೆರುಕುಬೇರನಿಗೆ ತಿಳಿಸಿದರು. ಕುಬೇರನು ಸಮವ ಶೃತಿಯ ಮಂಟಪವನ್ನು ರಚಿಸಿದನು. ಗಂಧಕುಟ್ಟಿಯ ಮುನಿವಕನಿಗೆ ರಂಜಿಸಿತು.

ನಲತ್ತೊಂದುವರೆ ಬಿಲ್ಲು ಎತ್ತರವಾದನು. ಮಿಸುನಿ ಬಣ್ಣದ ಉನ್ನತಾಂಗವನ್ನು ಪಡೆದನು. ನೂರಾರು ಸೂರ್ಯ ಚಂದ್ಸ್ರರನ್ನು ಮಿರಿಸುವ ದೇಹ ಕಾಂತಿಯನೂ,ಮೂರುಲಕ್ಷ ವರುಷ ಆಯಷ್ಯನನ್ನೂ ಗಳಿಸಿ ಅರ್ಹಂತನಾದನು. ಪ್ರತಿಹಾರ್ಯಾ ದಿಗಳು ವಶವಾದವು.

ನಾಲ್ಕು ವಿಧ ಘಾತಿಕರ್ಮಗಳನ್ನು ನಾಶಮಾಡಿದನು. ಭೂಮಿಯಿಂದ ಗಗನಕ್ಕೆ  ಸರಿದನು. ಸಮವಸರಣದ ವಿಭವಲಕ್ಷಿಯಲ್ಲಿ ಬೆರೆದನು. ಧರ್ಮಾಮೃತವನ್ನು ಸುರಿದು ಭವ್ಯತಿಯನ್ನು ಕಾಪಾಡಿದನು. ಕೆಲವು ದಿನಗಳ ಮೇಲೆ ಅಪವರ್ಗ ರಮಣಿಯನ್ನು ಕೂಡಿದನು.

ಗೌತಮ ಮುನಿಯ ಹೇಳಿದ ಪಾಪರಹಿತ ಸನತ್ಕುಮಾರ ಕಥೆಯನ್ನು ಶ್ರೇಣಿಕನು ಕೇಳಿದನು. ಸಂತೋಷದಿಂದ ಶ್ರೇಣಿಕ ಅರಸಿ ಚೇಳಿನಿಯೊಡನೆ ರಾಜಪುರಿಗೆ ಹೋದನು.

## ಸನತ್ಕುಮಾರ ಕಥೆಯ ಹರಹು

ಸನತ್ಕುಮಾರ ಕಥೆ ಸಂಸ್ಕೃತ, ಪ್ರಕೃತ, ಅಪಭ್ರಂಶ ಮತ್ತು ಕನ್ನಡ ಭಾಷೆಗಳಲ್ಲಿ ದೊರೆಯುತ್ತದೆ.

ಜಿನಸೇನ –ಗುಭಭದ್ರರು ಸಂಸ್ಕೃತದಲ್ಲಿ ರಚಿಸಿದ 'ಮಹಾಪುರಾಣದಲ್ಲಿ ದೊರೆಯುವ ಸನತ್ಕುಮಾರ ಕಥೆಯೇ ನಮಗೆ ದೊರೆತಿರುವದಲ್ಲಿಮೊಟ್ಟ ಮೊದಲನೆಯದು. ತ್ರಿಷಷ್ಟಿ ಶಲಾಕಾ ಪುರುಷರ ಚರಿತ್ರೆಯನ್ನು ಅವರು ಬರೆಯುವಾಗ ಸನತ್ಕುಮಾರನದು ನಾಲ್ಕನೆಯ ಚಕ್ರಿಯ ಕಥೆಯಾಗಿ ಬಂದಿದೆ.ಇಲ್ಲಿ ನಾವು ಕಾಣುವುದು ದಿಂಗಬರ ಸಂಪ್ರದಾಯದ ಕಥೆ.

ಹನ್ನೆರಡನೆಯ ಶತಕದಲ್ಲಿ ಗುರ್ಜರ ಚಾಲುಕ್ಯರ ಆ ಸ್ಥಾನದೊಳಗಿನ ಪಂಡಿತ ಹೇಮಚಂದ್ರನ ತ್ರಿಷಷ್ಟಿ ಶಲಾಕಾ ಪುರುಷ ಚರಿತವೆಂಬ ಗ್ರಂಥದಲ್ಲಿ ಶ್ವೇತಾಂಬರ ಸಂಪ್ರದಾಯದ ಕಥೆ.

ಪ್ರಾಕೃತ ಸಮರಾ ಇಚ್ಚ ಕಹಾ ಮತ್ತು ಅದರ ಸಂಸ್ಕೃತಸಾರರರೂಪವಾದ ಪ್ರದ್ಯುಮಸೂರಿಯ ಸಮರಾದಿತ್ಯಸಂಕ್ಷೇಪವು ಹುಣಸೇನನ ಬಂಬತ್ತು ಭವಗಳ ಬಗ್ಗೆ ತಿಳಿಸುತ್ತದೆ. ಈಎಲ್ಲ ಭವಗಳಲ್ಲೂ ಅಗ್ನಿಶರ್ಮನ ಆತ್ಮ ಗುಣಸೇನೆ ಆತ್ಮದ ದ್ವೇಷದಿಂದ ಕೂಡಿದೆ.ಎಲ್ಲ ಮರುಜನ್ನಗಳಲ್ಲೂ ಗುಣಸೇನನ ಆತ್ಮ ಅಂತಿಮವಾಗಿ ನಾಶಗೊಳುವವರೆಗ ಅಗಿಶರ್ಮನ ಆತ್ಮದಿಂದ ನಾಶಾಗುತ್ತದೆ. ಈ ಕಥೆ ಶ್ವೇತಾಂಬರ ಮತ್ತು ದಿಗಂಬರ ಸಂಪ್ರದಾಯಗಳಿಗೆ ಭಿನ್ನವಾದುದು.

ಹರಿಷೇಣಾಚಾರ್ಯನ ಬೃಹತ್ಕಥಾ ಕೋಶದಲ್ಲಿ ಸನತ್ಕುಮಾರಚರಿತೆ ೧೨೯ ನೆಯ ಕಥೆಯಾಗಿ ಬಂದಿದೆ.

ಭಾವದೇವ ಸೂರಿಯ ಪಾರ್ಶ್ವನಾಥಾ ಚರಿತೆಯಲ್ಲಿ ಸನತ್ಕುಮಾನ ಕಥೆ ದೊರೆಯುತ್ತದೆ.

ಜಿನಸೇನ ಮತ್ತು ಗುಣಭದ್ರಾಚಾರ್ಯರ ಮಹಾಪುರಾಣವನ್ನು ಹತ್ತನೆಯ ಶತಮಾನದಲ್ಲಿ ಅಪಭ್ರಂಶ ಭಾಷೆಗೆ ಪುಷ್ಪ ದಂತನು ಅನುವಾದಿಸಿದ 'ತಿಸಟ್ಟಿ ಮಹಾಪುರಿಸ ಗುಣಾಲಂಕಾರ' ಎಂಬ ಗ್ರಂಥದಲ್ಲಿಯೂ ಸನತ್ಕುಮಾರ ಕಥೆ ಇದೆ.

ಪ್ರಾಕೃತದಲ್ಲಿ ಜಯಸಿಂಹಸೂರಿ ವಿರಚಿತ ಧರ್ಮೋಪದೇಶ ಮಾಲಾ ವಿವರಣ ದಲ್ಲಿ ಸಮತ್ಕುಮಾರ ಕಥೆ ದೊರಕುತ್ತದೆ.

ವೃಷಭಾಚಾರ್ಯ ವಿರಚಿತ ತಿಲೋಯಪಣ್ಣತ್ತಿಯಲ್ಲಿ ದ್ವಾದಶ ಚಕ್ರಿಗಳ ಹೆಸರು ಹೇಳುವಲ್ಲಿ ಸನತ್ಕುಮಾರ ಹೆಸರು ಬರುವುದಲ್ಲದೆ–

[illegible]
[illegible]

ಎಂಬ ವರ್ಣನೆ ಸಿಗುತ್ತದೆ. ॥೫–೮೬॥

ಸನತ್ಕುಮಾರ ಕಥೆಯ ಹರುಹು ಸಂಸ್ಕೃತ, ಪ್ರ್ಕೃತ.ಅಪಭ್ರಂಶಗಳಲ್ಲಿ ಹೀಗಿದೆ. ಕನ್ನಡದಲ್ಲಿ ಸನತ್ಕುಮಾರ ಕಥೆ ಸಾವಿರ ವರ್ಷಗಳಿಂದ ದೊರೆಯುತ್ತದೆ.

ಕನ್ನಡದ ಮೊಟ್ಟ ಮೊದಲ  ಗದ್ಯ ಗ್ರಂಥ ವಡ್ಡಾರಾಧೆಯಲ್ಲಿ ಸನತ್ಕುಮಾರ ಕಥೆ ನಾಲ್ಕನೆಯ ಕಥೆಯಾಗಿ ಬಂದಿದೆ. ಸನತ್ಕುಮಾರ ಕಥೆ ಇಲ್ಲಿ ಸಾಕಷು ವಿಸಾರವಾಗಿದೆ.

ಜಿನಸೇನ –ಗುಣಭದ್ರರ ಮಹಾಪುರಾಣವನ್ನು ಕನ್ನಡಕ್ಕೆ ಗದ್ಯದಲ್ಲಿ ಅನುವಾದಿಸಿದ ಚಾವುಂಡರಾಯರ ತ್ರಿಷಷ್ಟಿ ಲಕ್ಷಣ ಮಹಾಪುರಾಣ ಅಥವಾ ಚಾವುಂಡರಾಯ ಪುರಾಣದಲ್ಲಿ ಈ ಕಥೆ ನಾಲ್ಕನೆಯ ಚಕ್ರಿಯ ಕಥೆಯಾಗಿ ದೊರೆಯುತ್ತದೆ. ಇಲ್ಲಿ ಸನತ್ಕುಮಾರನ ಒಂದೇ ಬಂದು ಭವದ ಕಥೆ ಬಂದಿದೆ.

ಅಜಿತ ಪುರಾಣ ೧೧–೧೯ ವಚನದಲ್ಲಿ ಬರುವ ದ್ವಾದಶ ಚಕ್ರವರ್ತಿ ನಾಮೋಲೇಖದಲ್ಲಿ ಸವತುಮಾರನ ಹೆಸರು ಬಂದಿದೆ.

ಸುಮಾರ ೫೦೦ ವರ್ಷಗಳ ಕಾಲ ಸುಪವಾಗಿದ್ದ ಈ ಕಥಾವಸು ಸು. ೧೪೮೫ ರಲ್ಲಿ ತೆರಕಣಾಂಬಿ ಬೊಮ್ಮರಸನಿಗೆ ಇಡೀ ಕಾವ್ಯದ ವಸ್ತುವಾಗಿ ಪರಿಣಮಿಸಿದೆ. ಕನ್ನಡದಲ್ಲಿರುವ ಸನತ್ಕುಮಾರ ಚರಿತ್ರೆಯನ್ನು ಬಿಟ್ಟರೆ ಈ ಪ್ರಮಾಣದ  ಸ್ವತಂತ್ರ ಕೃತಿ ಸನತ್ಕುಮಾರನ ಮೇಲೆ ಇನ್ನಾವ ಭಾಷೆಯಲ್ಲಿಯೊ ಇಲ್ಲವೆಂಬುದು  ಗಮನಾರ್ಹ.

ಶ್ರೀರಂಗಪಟ್ಟಣದ ಆದಿಜಿನೇಶನ ಸನ್ನಿದಿಯಲ್ಲಿ ಪಾಯಣವರ್ಣಿಯಿಂದ ೧೬೦೬ರಲ್ಲಿ ರಚಿತತವಾದ ಸನತ್ಕುಮಾರ ಚರಿತ್ರೆಯು ಸಾಂಗತ್ಯದಲ್ಲಿದೆ.

ಈ ಮೇಲಿನ ಸಮಿಕ್ಷೆಯಿಂದ ನಾವು ಗಮನಿಸಬಹುದಾದ ಒಂದು ಸಂಗತಿ ಯೆಂದರೆ ಸನತ್ಕುಮಾರನ ಕಥೆಯಾನ್ನು ಪ್ರಸಂಗಿಕವಾಗಿ ಎಲ್ಲರೂ ಹೇಳಿಕೊಂಡು ಹೋಗಿದಾರೆ. ಆದರೆ ಆ ಕಥೆಯನ್ನು ಮೊದಲನೆಯದಾಗಿ ಒಂದು ಕಾವ್ಯದ ಚುಕಟ್ಟಿಗೆ ಅಳವಡಿಸಿದ ಸಾಹಸ ತೆರಕಣಾಂಬಿ ಬೊಮ್ಮರಸನಿಗೆ ಸಲ್ಲುತ್ತದೆ.

ಆಕರ

ತೆರಕಣಾಂಬಿ ಬೊಮ್ಮರಸನ ಸನತ್ಕುಮಾರ ಚರಿತೆಗೆ ಆರಕ ವಡ್ಡಾರಾಧನೆಯ ಸನತ್ಕುಮಾರ ಕಥೆ. ಅವನು ಹೆಜ್ಜೆ ಹೆಜ್ಜೆಗೂ ವಡಾರಾಧನೆಯುನ್ನು ಅನುಸರಿಸಿದ್ದಾನೆ. ವಡ್ಡಾರಾಧನೆಯಲ್ಲಿ ಗದ್ಯದಲ್ಲಿರುವ ಅಂಶವನ್ನು ಷಟ್ಪದಿಗೆ ಅಳವಡಿಸಿದ್ದಾನೆ. ವಿಶೇಷ ವೇನೆಂದರೆ ವಡ್ಡಾರಾಧನೆಯಲ್ಲಿ ಶೋಕ ಮತ್ತು ವೃತ್ತಗಳು ಯಾವ ಸಂದರ್ಭದಲ್ಲಿ ಬಂದಿವೆಯೋ ಅದೇ ಸಂದರ್ಭದಲ್ಲಿ ಆ ಶೋಕ ಮತ್ತು ವೃತ್ತಗಳ ಭಾಶಾಂತರವಲ್ಲ ದಿದ್ದರೂ ಭಾವಾನುವಾದವಿದೆ. ಈ ಮೇಲಿನ ಹೇಳಿಕೆಯನ್ನು ಕೆಳಗೆ ಕೊಡುವ ಕೆಲವು ನಿದರ್ಶನಗಳು ಸಮರ್ಥಿಸುತ್ತೆವೆ.

ಅ) “ಮನೋಹರಿಯೆಂಬ ಜಾವದಾಗಳ ಕರಿಣಿ ಶತಂಗಳಿಂ ಪರಿವೇಷಿತ ನಾಗಿ ತಿಳಿನೀರಕೊಳದೊಳವೆ  ಕ್ರೀಡಿಸುವ ಸೊರ್ಕಾನೆಯುಮಂ ಫಲಭರಿತಮಾದ ಮಾವಿನ ಮರನುಮಂ ಕನಸಿನೊಳ ಕಂಡು ಮನೋರಥ ಸಿದ್ದಿ ಯಾಯ್ತೆಂದು ಒಸೆದು ಮಗುಟ್ದು ನಿದ್ರಾವಶಗತನಾದೊನಂ”

(ವಡ್ಡರಾ. ೫೪, ೧೨-೧೫ )

‘ವರ ಮನೋಹರಿಯೆಬಂ ಜಾವದೊ
ಳಿರದೆ ಕಂಡನು ಕನಸನೊಂದನು........

(ಸನತ್ಕು. ೩-೨೩)

ತಿಳಿಗೊಳದಿ ಕರಿಣಗಳು ನೂಱಿರ
ಬಲಗದೊಳಗೊಂದಾನೆ ಸರಸದಿ
ಜಲವ ಮೊಗೆ ಮೊಗೆದಿಟ್ಟು ನೆರೆ ನಲ್ಲಿದಾಡುತಿಪ್ಪುದನು
ಲಲಿತ ಕುಸುಮಿತ ಕೋರಕಿತ ಸ
ತ್ಫಲಿತ ಚೂತದ್ರುಮವ ಕಂಡೆ
ನ್ನೊಲವು ಸಿದ್ದಿಪುದೆಂದು ಮಗುಳವನಾಂತನಿದ್ರೆಯನು”

(ಸನತ್ಕು . ೩– ೨೪)

ಆ) "ಸ್ವಾಮಿ ವ್ರತ ಶೀಲೋಪವಾಸ ತಪಶ್ಚರಣಂ ಸಂನ್ಯಸನಾದಿ ಶುಭಾನುಷ್ಠಾನ ಕ್ರಿಯೆಗಳಿಂ ಸತ್ಪುರುಷಂ ಮಱುಭವದೊಳ ದೇವಾಂಗನೆಯರ್ಕಳೆಱಿಯ ನಕ್ಕುಂ ನೀಮಿಾ ಭವದಿಂದಿಂತಪ್ಪ ವಿಭವಮುವೆಯ್ದಿದಿರಿದೆನೆಗೆ ಮಹಾವಿಸಯಮೆನೆ ಕುಮಾರನಿಂತೆಂದನಿವರ್ಗಳ್ ದೇವಕನ್ನೆಯರಲ್ಲರ್ ವಿದ್ಯಾಧರಿಯರ್ಕಳೆನೆ ಇವರ್ಗಳಂ ನೀಮೆಂತು ಪೆತ್ತಿರೆಲ್ಲಿ ಮೆಣಾವ ಸ್ವರೂಪದಿಂ ಬಂದಿರಿದನೆನೆಗೆ ತಿಳಿಯೆ ಪೇೞಿಮೆನೆ"

(ವಡ್ಡಾರಾ .೫೫–೨೩ ರಿಂದ ೫೬–

೧)

"ಅರಸ ಕೇಳೈ ಮನುಜ ಜನ್ಮದಿ
ಪರಮ ಧರ್ಮದ ದಾರಿಯಲಿ ಸಂ
ಚರಿಸಿ ವ್ರತಶೀಲೋಪಚಾರಗಳಲ್ಲಿ ನಡೆದವನು
ಪರದೊಳನಿಮಿಷ ಮಾನಿನಿಯರಿಗೆ
ವರನಹುದು ತಾ ಸಹಜವಿಹದೊಳು
ಸುರತಿಯರಿಗೆ ನೀನೆರೆಯನಾದಿರವ ಪೇಳೆಂದ"

(ಸನತ್ಕು೪–೩೨)

ಆ) "ಭವಿತವ್ಯಂ ಭವತ್ಯೇವ ಕರ್ಮಣಾಮೇಷ ನಿಶ್ಚಯ;
ವಿಪತ್ತೌ ಕಿಂ ವಿಷಾದೇನ ಸಂಪತ್ತೌ ವಿಸ್ಮಯೇನೆ ಕಿಂ"

(ವಡ್ಡಾರಾ. ೫೮–೨೩.೨೪)

"ಕ್ಷಣಕೆ ಸುಖಿಯಾಗುವನು ಮತ್ತಾ

ಕ್ಷಣಕೆ ದುಃಖಿತನಾಗುವನು ತ

ತ್ಷಣಕೆ ಸೌಭಾಗ್ಯದಲಿ ರಂಜಿಸಿ ಬಹುದರಿದ್ರದಲಿ

ಕ್ಷಣಕೆ ತೋರುವನುಭಯ ಕರ್ಮದ

ಕುಣಿಕೆಯೊಳು ಬಂದಿಸಿದ ಜೀವನು

ಕ್ಷಣಕೆ ಬಗೆ ಬಗೆಯಹನದೇನಾಶ್ಚರ್ಯವೆಂದನವ"

(ಸನತ್ಕು. ೭-೭)

"ಒರ್ವಳ ಬಡಬಿರ್ದಿನಿಱಿಸಿ ಪ್ರಥಮ ದಿವಸದೊಳೆ

ಪಾರಕಿನ ಕೂೞುಮವರೆಯುವಣ ಯುಮಾಡಿನಳೆಯುಮಂ

ಬಡ್ಡಿ ಸಿದೊಡದನಮೃತಮನುಣ್ಬಂತುಂಡು"

(ವಡಾರಾ. ೬೮-೨೫)

" ನಿಲಿಸಿದಳು ದಾರಿದ್ರ್ಯ ದಂಗನೆಯೊರ್ವಳಾದರದಿ ( ಸನತ್ಕು. ೧೭-೧)

ನಾರಿಯುತಿ ದಾರಿದ್ರ್ಯ ದಲ್ಲಿಯಾ

ಗಾರದೊಳಗುಳ್ಳವರೆ ತೈಲವ

ಪಾರಕಿನವೋಗರನನೀಯಲು ಸುಧೆಯಸವಿವಂತೆ

ಸಾರಿದನು" (ಸನತ್ಕು.೧೭-೨)

ಈ ಉದಾಹರಣಗಳಲ್ಲದೆ  ಕುತೂಹಲವುಳ್ಳವರು ಈ ಕಳಗೆ ತೋರಿಸಿದ ಸಾಮ್ಯಗಳನ್ನು ಗಮನಿಸಿಬಹುದು. ಮೊದಲ ಸಂಖ್ಯೆ ವಡ್ಡಾರಾಧನೆಯ ಉಲ್ಲೇಖವನ್ನೂ ಎರಡನೆಯ ಸಂಖ್ಯೆ ವಡ್ಡಾರಾಧನೆಯ ಉಲ್ಲೇಖವನ್ನೂ ಸೂಚಿಸುತ್ತವೆ.

| ವಡ್ಡಾರಾಧನೆ | | ಸನತ್ಕುಮಾರ ಚರಿತೆ | |
|---|---|---|---|
| ಪುಟ | ಪಂಕ್ತಿ | ಸಂಧಿ | ಪದ್ಯ |
| ೫೬ | ೧೦ | ೫ | ೭.೮.೯.೧೦ |
| ೫೭ | ೨೦ | ೬ | ೧೯,೨೦ |
| ೫೮ | ೪ | ೬ | ೨೬ |
| ೫೮ | ೨೦ | ೭ | ೬ |
| ೫೯ | ೨ | ೭ | ೧೫ |
| ೫೯ | ೭ | ೭ | ೧೯ |
| ೫೯ | ೩೦ | ೭ | ೩೨ |
| ೬೦ | ೯ | ೭ | ೩೪ |
| ೬೦ | ೧೫ | ೭ | ೪೩ |
| ೬೦ | ೨೫ | ೭ | ೪೭,೪೯ |
| ೬೧ | ೨ | ೮ | ೩ |
| ೬೧ | ೮,೯ | ೧೦ | ೮, ೬ |
| ೬೧ | ೧೫ | ೮ | ೪೩ |
| ೬೨ | ೨೮ | ೯ | ೧೮ |
| ೬೩ | ೧೦ | ೧೧ | ೧ |
| ೬೨ | ೧೨ | ೧೧ | ೫ |

೬೩ ೧೮ ೧೧

೧೩

೬೩ ೨೪,೨೫ ೧೧

೧೫,೧೬

೬೪ ೨ ೧೧ ೧೮

೬೪ ೨೦ ೧೧ ೨೬

೬೪ ೨೮ ೧೧ ೩೩.೩೪

೬೫ ೭ ೧೧ ೧೬,೧೭

೬೫ ೨೩ ೧೨ ೭೨

೬೫ ೨೭ ೧೬ ೨

೬೮ ೨೧ ೧೭ ೩೬

## ಕಥಾ ವಿಸ್ತರಣೆ

ಕಥಾ ಸಂವಿಧಾನದಲ್ಲಿ ಹೆಜ್ಜೆ ಹೆಜ್ಜೆಗೊ ವಡಾರಾಧನೆಯನ್ನು ಅನುಸರಿಸಿದ ಬೊಮ್ಮರಸ ತನ್ನ ಗ್ರಂಥ ವಿಸ್ತರಣಕ್ಕೆ, ವರ್ಣನಾ ಕೌಶಲಕ್ಕೆ ಹೇಗೆ ಎಡೆಮಾಡಿಕೊಂಡಿರುವನೆಂಬುದನ್ನು ಕೆಳಗಿನ ಉಲೇಖಗಳಿಂದ ಗಮನಿಸಬಗುದು.

"ಕೊಳನಂ ಪೊಕ್ಕೆ ಸ್ವೇಚ್ಛೆಯಿಂ ಕ್ರೀಡಿಸಿ ಪೊಱಮಟ್ಟನನಾ ಖೇಚರಂ ಕೊಂಡು ಪೋಗಿ ತದ್ವನದೊಳತಿ ರಮಣೀಯವಪ್ಪ ಪ್ರದೇಶದೊಳಾಡುತಿರ್ದ ವಿದ್ಯಾಧರ ಕನ್ನೆಯರ್ಕಲ ಪಕ್ಕದಿರಿಸಿಪೋದನ್"

(ವಡ್ಡಾರಾ. ೫೭–೯)

ಈ ಭಾಗದಲ್ಲಿ "ನೀನೊಲಿದಡರು ಬಾರೆಂದು ಪುಷ್ಪಕದೊಳಗೆ ಕೊಂಡೊಯ್ದನು ಕುಮಾರನ ಮುದದೊಲಾ ಖರಚರ" (ಸನತ್ಕು. ೫–೨೭) ಎಂದು ಹೇಳಿದ ಮೇಲೆ, ೫–೨೮ ರಿಂದ ೫–೪೧ ಸಂದಿಪೂರ್ತ ಮತ್ತು ಆರನೆಯ ಸಂಧಿಯಲ್ಲಿ ೧–೧೭ ಪದ್ಯಗಳ ವರೆಗೆ ಜಲಕ್ರೀಡೆ ಮತ್ತು ಪುಷ್ಪಾಪಚಯಗಳನ್ನು ವರ್ಣಸಿದ್ದಾನೆ.

ವಡ್ಡಾರಾಧನೆಯಲ್ಲಿ "ದಿವ್ಯ ದೇವತೆಗಳ ಭಾಂದವಜನಮಾಗೊಡೆಯಳಂ ಮಹಾವಿಭೊತಿಯಿಂದಂ ಪಾಣಿಗ್ರಹಣ ಪುರಸ್ಸರಂ ಸಂದ್ಯಾಳಿಂತನ್ಯೋನ್ಯ ಸಂಬದದಿಂ ಗಾಂಧರ್ವ ಕಲ್ಯಾಣದೊಳ್ಕೂಡಿ ಸುಖದಿಂದಿರ್ಪೋರ್"

(ವಡಾರಾ. ೬೦–೨೭)

ಈ ಸಂದರ್ಭದಲ್ಲಿ ಬೋಮ್ಮರಸನು ಸಂಧ್ಯಾವಳಿಯ ಗಾಂಧರ್ವ ವಿವಾಹವನ್ನು ಮಾತ್ರ ಮಾಡಿಸುತ್ತಾನೆ. ಸುನೆಂದೆಯ ವಿವಾಹ ಸಮಾರಂಭವನ್ನು ಏರ್ಪಡಿಸಿ ೧೩ನೆಯ ಸಂದಿಯಲ್ಲಿ ಮದುವೆಯನ್ನು ಮಾಡಿಸಿ ೧೪ನೆಯ ಸಂಧಿಪೂರ್ತ ವೇಶ್ಯಾ ವಾಟಿಕೆಯ ವರ್ಣನೆ ಇದೆ.

ವಡ್ಡಾರಾಧನೆಯಲ್ಲಿ "ತಮ್ಮ ಮಾವಂಗಳಂ ಬಿಡಿಸಿ ವಿಚಿತ್ರಮಪ್ಪ ರಥಗಜ ತುರಗ ಗರುಡ ಕಳಹಂಸ ಮಯೊರ ಮಕರ ಸಿಂಹ ವಿಮಾನಾಧಿರೊಢರ್ಕಲಪ್ಪ ವಿದ್ಯಾದರ್ಕಕುಮಷ್ಟ ಸಹಸ್ರ ಸಂಖ್ಯಾ ಪ್ರಮಾಣಮಪ್ಪರಸಿಯರ್ಕಳುಂ ಬೆರಸು ಮಹಾ ವಿಭೂತಿಯಿಂದಂ ಬಂದು ಹಸ್ತಿನಾಪುರಮಂ ಪೊಕ್ಕನಿಬರುಂ ವಿಶ್ವಸೇನೆ ಮಹಾ ರಾಜಂಗಂ ಸಹದೇವಿ ಮಹಾದೇವಿಗಂ ಸಾಷ್ಟಾಂಗಮೆಱಗಿ ಪೊಡೆವಟ್ಟು ಅವರಾಶೀ ರ್ವಚನ ಶತಸಹಸ್ರಂಗಳನಾಂತುಕೊಂಡು ಸುಖದಿಂದಿರೆ" (ವಡ್ಡಾರಾ. ೬೫–೧೯) ಅನ್ನುವಲ್ಲಿ ಹನ್ನೆರಡನೆಯ ಸಂಧಿಯ ೨೧ನೆಯ ಪದ್ಯದಿಂದ ೭೪ ಪದ್ಯಗಳವರೆಗೆ ಸನುತ್ಕುಮಾರ

ಪ್ರಯಾಣ ಅಲ್ಲಿನ ಕಾರಬಾರು ಅದನ್ನು ನೋಡಲು ಕಾತರಗೊಂಡ ಜನ ಇವುಗಳ ವರ್ಣನೆ ಸಾಂಗೋಪಾಂಗವಾಗಿ ನಡೆದಿವೆ.

ಈ ಸಂದರ್ಭದಲ್ಲಿಯೇ ಬೊಮ್ಮರಸನ ವರ್ಣನೆಗಳ ಬಗ್ಗೆ ಎರಡು ಮಾತು ಹೇಳುವುದು ಸೂಕ್ತ. ಒಟ್ಟಂದದಲ್ಲಿ ಸನತ್ಕುಮಾರ ಚರಿತೆ ಮತ್ತು ಜೀವಂಧರ ಚರಿತೆಗಳನ್ನು ಗಮನಿಸಿದಾಗ ಬೊಮ್ಮರಸನ ವರ್ಣನಾ ಪ್ರಿಯತೆಯ ಅರಿವು ನಮಗುಂಟಾಗುತ್ತದೆ. ವಾಸ್ತವವಾಗಿ ಸನತ್ಕುಮಾರ ಕಥೆ ಚಿಕ್ಕದು. ಅದನ್ನು ಒಂದು ಇಡೀ ಕಾವ್ಯವನ್ನಾಗಿ ಮಾಡುವ ಸಂದರ್ಭದಲ್ಲಿ ವರ್ಣನೆಗಳಿಗೆ ಸೂತ್ರವಾಗಿ ಪರಿಣಮಿಸಿದೆ. ಈ ಕ್ಯಾವದಲ್ಲಿ ಮೇಲು ನೋಟಕ್ಕೆ ವರ್ಣನೆಗಳು ಹೆಚ್ಚೆಂದು ಕಂಡರೂ ರಸದ ದೃಷ್ಟಿಯಿಂದ, ಆ ಕಾಲದ ಜನತೆಯ ಮನೋಧರ್ಮದ ದೃಷ್ಟಿಯಿಂದ ಸೂಕ್ತವಾಗಿವೆ.

ಸನತ್ಕುಮಾರ ಅತ್ಯಂತ ಸುದಂರನಾದನು. ಅವನ ಚರಿತೆಯನ್ನು ಸುದಂರವಾಗಿ ಮಾಡುವ ಪ್ರಯತ್ನವನ್ನು ಇಲ್ಲಿ ಕಾಣಬಹು. ವರ್ಣನೆಗಳಲ್ಲಿ ಸಂಪ್ರದಾಯದ ಶೃಂಖಲೆಯಿದ್ದರೂ ಅಲ್ಲಲ್ಲಿ ಹೊಸತನವಿದೆ. ಉದಾಹರಣೆಗೆ ಈಪದ್ಯಗಳನ್ನು ನೋಡಬಹುದು. ಅರಣ್ಯವನ್ನು ವರ್ಣಿಸುವಾಗ ಅದನ್ನು–

ಅರಗಿಳಿಗಳೋದುವ ಮಟವೊ ನು
ಣ್ಚರದ ಪಿಕಗಳ ಗಾನಶಾಲೆಯೊ
ಪಿರಿದು ನಟಿಸುವ ನವಿಲ ನಾಟಕಮಂಟಪವೊ ಬಿಡದೆ
ಚರಿಸುವಂಚೆಗಳಾಡುವಂಗಣ
ವೊರೆವ ಮಧುಪದ ಪ್ರೇಮದಾಲಯ
ವರವಸಂತನರಾಜಗೃಹವೆನೆ ವನವು ರಂಜಿಸಿತು

ಉದ್ದಿನ ಕಡುಬನ್ನು ವರ್ಣಿಸುವಾಗ ಹೊಸ ಕಲ್ಪನಾ ಲಹರಿಯನ್ನೇ ಹರಿಸಿದ್ದಾನೆ. ಆ ಕಡುಬು–

ಬಟ್ಟವೆಣ್ಣೆಯೊ ಮಿಂಚಿನೊಬ್ಬುಳಿ
ಬಟ್ಟಿತಾದುದೊ ಅಮೃತರಸವಳ
ವಟ್ಟು ವೃತ್ತದ ಪಿಂಡವಾದುದೊ ಚಂದ್ರಿಕೆಯ ಬಂದು
ಘಟ್ಟಿಗೊಂಡಿತೊ ಎನಲು ನೋಳ್ಪರ
ದಿಟ್ಟಿಗೊಲವನು ಮನಕೆ ಹರುಷವ
ಪುಟ್ಟಿಪುದ್ದಿನ ಕಡುಬ ಸವಿದರು ನೃಪರು ಮನನಲಿಯೆ

ಹೀಗೆ ವರ್ಣನೆಗಳಲ್ಲಿ ಬೊಮ್ಮರಸ ಕವಿತಾ ಸಾಮರ್ಥ್ಯವನ್ನು ಗಮನಿಸಬಹುದು. ಪ್ರತಿಭಾವಂತ ಕವಿಗಳ ಕೈಯಲ್ಲಿ ಪಳಗಿದ್ದ ಷಟ್ಪದಿಯ ಲಯ ಬೊಮ್ಮರಸನಿಗೆ ಸಿದ್ದಿಸಿದೆ. ಷಟ್ಪದಿ ಮತ್ತು ಸಾಂಗತ್ಯಗಳಲ್ಲಿ ಅವನ ವರ್ಣನೆ ನಿರಂತರವಾಗಿ ಸಾಗಿದೆ.

## ಜನ ಜೀವನ

"ದೇಶ, ಕಾಲ ,ಉದ್ದೇಶ್, ಆವೇಶ ,ಆವಶ್ಯಕತೆಗಳಿಗೆ ಅನುಸಾರವಾಗಿ ಪ್ರತಿಭಾಕಾರ್ಯವು ವಿವಿಧತೆಯನ್ನು ಹೊಂದುವುದು, ಪರಿವತನವನ್ನು ಹೊಂದುವುದು....... ಎಲ್ಲ ಪದ್ಧತಿಗಳಂತೆ ಕಾವ್ಯ ಪದ್ಧತಿಯೂ ಜೀವನರಸಪ್ರವಾಹದ ಮೇಲೆ ತೇಲಾಡುವ ದೊಡ್ಡ ಮಂಜುಗಡ್ಡೆಯಾಗಿದೆ,. ಜೀವನ ಸಂಸ್ಕೃತಿಯೇ ಗಟ್ಟಿಯಾಗಿ ಮಂಜುಗಡ್ಡೆಯ ಆಕಾರದ ಪದ್ಧತಿಯಾಗುತ್ತದೆ. ಕವಿ ಯಾವುದೇ ಕಥಾ ವಸ್ತುವನ್ನು ಆರಿಸಿ ಕೊಂಡರೂ ಅವನ ಅಭಿವ್ಯಕ್ತಿ ಅವನ ಜೀವನಾನುಭವವನ್ನು ಅವಲಂಬಿಸಿರುತ್ತದೆ. ಅವನು ಕಂಡುದು, ಕೇಳಿದುದು, ಅಭ್ಯಾಸಮಾಡಿದುದು ಅವನ ಎಲ್ಲ ಕಾರ್ಯಗಳಲ್ಲಿಯೊ ಪ್ರಧಾನ ಪಾತ್ರವಹಿಸುತ್ತದೆ. ಹಾಗೆಯೇ ಕಾವ್ಯ ರಚನೆಯಲ್ಲೂ ಕೂಡ. ಅವನು

ನಿಂತ ನೆಲದ ಮಣ್ಣಿನ ವಾಸನೆ ಅವನ ಕಾವ್ಯದಲ್ಲಿ ಎದ್ದು ಕಾಣುವುದು ಅನಿವಾರ್ಯ. ಅವನ ಅನುಭವದ ಅಭಿವ್ಯಕ್ತಿ ಅವನ ಕೃತಿಗಳಲ್ಲಿ ಎಷ್ಟರ ಮಟ್ಟಿಗೆ ಬಂದಿದೆ. ಎಂಬುದು ಅವನ ಮೇಲೆ , ಪ್ರತಿಭೆಯ ಮೇಲೆ ಅವಲಂಬಿಸಿರುತ್ತದೆ.

"ಪುರಾಣ ವ್ಯಕ್ತಿಯ ಇಲ್ಲವೆ ಸುಪ್ರಸಿದ್ಧನಾದ ಉದಾತ್ತ ಪುರುಷನ ಜೀವನವನ್ನೇ ಆಧರಿಸಿಕೊಂಡು ಕಥಾ ವಸ್ತು ಸಂಗ್ರಹವನ್ನು ಮಾಡುತ್ತಿದ್ದರು. ನಾಯಕರು ಉದಾತ್ತನೆಂದ ಮೇಲೆ ಸಾಮಾನ್ಯರಿಗಿಂತ ಮೇಲ್ಲಿನ ಮಟ್ಟದಲ್ಲಿರುವವನೆಂಬುದು ಸ್ಪಷ್ಟವಷ್ಟ. ಇದರಿಂದ ಕಥಾ ಸಂವಿಧಾನವು ಬಹ್ವಂಶದಲ್ಲಿ ಜನಜೀವನಕ್ಕೆ ಅನ್ವಯಿಸದಿದ್ದು, ಕಾವ್ಯಗಳನೋದುವವರಲ್ಲಿ ವಿಸ್ಮಯವನೇನೊ ಉಂಟು ಮಾಡುತ್ತಿದಿತ್ತು. ಈ ಮಾತು ಪುರ್ಣಸತ್ಯ ನಿಜ ಆದರೂ ಕವಿಯ ಆತ್ಮಪ್ರಜ್ಞೆ ಸಾಕ್ಷೀಪ್ರಜ್ಞೆಯಾಗಿ ನಿಲ್ಲದೆ. ತಾನೂ ಅನಿವಾರ್ಯವಾಗಿ ಅನಪೇಕ್ಷೇಣೀಯವಾಗಿ ಭಾಗವಹಿಸುತ್ತದೆ. ಈ ತತ್ವಕ್ಕೆ ಬೊಮ್ಮರಸ ಹೊರೆತಿಲ್ಲ ಎಂಬುದನ್ನು ಈಕೆಳಗಿನ ಅಂಶಗಳಿಂದ ಪ್ರತಿಪಾದಿಸಬಹುದು.

ಸುನತ್ಕುಮಾರನ ಪುರವಿಹಾರದ ಸಂದರ್ಭ. ಅವನು ರಾಜಧಾನಿಯ ರಸ್ತೆಯಲ್ಲಿ ಹೋಗುವಾಗ ಎರಡು ಬದಿಯಲೂ ಕಂಡ ದೃಶ್ಯ ಹೀಗಿದ್ದಿತು–

ಒರೆದು ಬಣ್ಣವ ತೂಗಿ ಬೆಲೆಗಳ
ನೊರೆದು ಮಿಸುನಿಯ ಘಟ್ಟಿಯೊಟ್ಟಿಲ
ಮರೆಯೊಳಿರುತಿಹ ಚಿನ್ನವರದರ ಹೊನ್ನಗುಪ್ಪಿಗಳ
ಸುರಿದು ಕೊಂಡಿಹ ನಾಣ್ಯಗಾಜಿರ
ತರತದದೊಳಿಹ ಕಂಚುಗಾಜಿರ
ಬರೆವ ಚಿತ್ರಿ ಗರಂಗಡಿಗಳನು ನೋಡುತೆಯಿತಂದ

ಮುತ್ತು ಹವಳದ ಕುಚ್ಚು ವಜ್ರದ
ಮೊತ್ತ ನೀಲದ ಗುಪ್ಪೆ ಮಾಣಿಕ
ದಿತ್ತರದ ರಾಶಿಗಳ ಗೋಮೇಧಿಕದ ವೈಢೂರ್ಯ
ಉತ್ತಮದ ರತ್ನಗಳ ಪಸರದ
ಬಿತ್ತರದೊಳೆಸವಂಗಡಿಗಳನು
ಚಿತ್ರಜೋಪಮ ಭೂಪ ನೋಡುತ ನಡೆದನೊಲವಿಂದ

ಈ ಸಂದರ್ಭದಲ್ಲಿ ವಿಜಯನಗರದಲ್ಲಿ ಘ್ರಸವಾ ಮಾಡಿ ಅಂದು ತಾನು ಕಂಡು–ಕೇಳಿದ ಸಂಗತಿಗಳನ್ನು ಬರೆದ ಪರ್ಷಿಯಾದ ಪ್ರವಾಸಿ ಅಬ್ದುಲ್ ರಝಾಕ್‌ನ

---

೧ ವಾ ಯ ತಪಸ್ಸು ,ಪುಟ ೧೭೩ ಕಡೆಂಗೋಡು ಶಂಕರಭಟ್ಟ

ಉಲೇಖವೊಂದನ್ನು ಗಮನಿಸಬಹು. "ರತ್ನಪಡಿ ವ್ಯಾಪಾರಸ್ಥರು ಬೇಕಾದ ಹಾಗೆ ಅಂಗಡಿಯ ಬೀದಿಗಳಲ್ಲಿಯೆ ಮುತ್ತು, ಮಾಣಿಕ, ಪಚ್ಚೆ, ವಜ್ರ ಮೊದಲಾದ ರತ್ನಗಳನ್ನು ಮಾರಲಿಕ್ಕೆ ಇಟ್ಟುಕೊಂಡು ಕುಳಿತಿರುವರು."

ಹೂವುಗಳ ಬಗ್ಗೆ ಅಬ್ದುಲ್ ರಝಾಕ್ ಹೀಗೆ ಬರೆದಿದಾನೆ. "ಇಲ್ಲಿ ಎಲ್ಲೆಲ್ಲಿಯೊ ಗುಲಾಬಿ ಹೂಗಳನ್ನು ಮಾರಲಿಕ್ಕೆ ಇರಿಸಿರುವರು. ಈ ಹೂಗಳನ್ನು ಬಿಟ್ಟು ಇಲ್ಲಿಯ ಜನರು ಇರಲಾರರು. ಹೂಗಳೆಂದರೆ ಇಲ್ಲಿಯವರಿಗೆ ಅನ್ನ ನೀರುಗಳಂತೆ– ಒಮ್ಮೊಮ್ಮೆ ಅವಕ್ಕಿಂತ ಹೆಚ್ಚೆಂದೂ ಹೇಳಬಹುದು –ಆವಶ್ಯಕವೆನಿಸುವುವು ......." ಈ ಹೂವುಗಳ ಬಗ್ಗೆ ಬರೆಯುವಾಗ ಬೊಮ್ಮರಸನು–

ಮರುಗದಾಗರ ಮಲ್ಲಿಗೆಯ ನೆಲೆ

ಕುರವಕದ ಕಣ ಕಮಲದಾರವೆ

ಸುರಗಿಯೆಡೆ ಸೇವಂತಿಗೆಯ ನಿಜಭೂಮಿ ಸಂಪಗೆಯ

ಬಿರಿ ಮುಗುಳ ನಿಧಿ ಕೇದಗೆಯ ಮೆದೆ

ಪರಿಮಳಿಪ ಮುಡಿವಾಳ ನಾನಾ

ಪರಿಯ ಹೊವಿನ ರಾಶಿಯಿಂದಂಗಡಿಗಳೊಪ್ಪಿದವು

ವಿಜಯನಗರದ ಸಂಸ್ಕೃತಿಯನ್ನು ಬಲ್ಲವರಿಗೆ, ಆ ಕಾಲದ ಜನಜೀವನದ ರಸಿಕತಯನ್ನು ಬಲ್ಲವರಿಗೆ ಇಲ್ಲಿನ ಚಿತ್ರಣ ಅಸಹಜವೆನಿಸಲಾರದು. ಅಲ್ಲಲ್ಲಿ ಉತ್ಪ್ರೇಕ್ಷೆ ಕಂಡು ಬಂದರೂ ವಾಸ್ತವಿಕ ಸತ್ಯವನ್ನು ಕಾವ್ಯ ಸತ್ಯವನ್ನಾಗಿ ಮಾಡುವಾಗ ಈಬದಲಾವಣೆ ಅನಿವಾರ್ಯ.

ಪುರಾಣ ಪುರುಷ ಸನತ್ಕುಮಾರನ ವಿವಾಹ ಸಂದರ್ಭದಲ್ಲಿ ನಾವು ಗಮನಿಸಿದಾಗ ನಮಗೆ ಕಂಡು ಬರುವುದು ಹದಿನಾಲ್ಕು ಹದಿನೈದನೆಯ ಶತಮಾನದಲ್ಲಿದ್ದ ಜೈನ ಬ್ರಾಹ್ಮಣ ಸಮಾಜದ ಶ್ರೀಮಂತ ವಿವಾಹ ಕಣ್ಣೆದುರು ನಿಲ್ಲುತ್ತದೆ–

“ಲಗವು ಸಮಿೂಪಿಸಿತು. ಸನತ್ಕುಮಾರನು ಆನೆಯ ಮೆಲೆ ಕುಳಿತಾ ಕಲ್ಯಾಣ ಮಂಟಪಕ್ಕೆ ಬಂದನು. ರಾಜಕುಮಾರಿಯರು ಪಲ್ಲಕ್ಕಿಯ ಮೇಲೆ ಬಂದರು ರಾಜರು ಅವರವರ ಜಾಗದಲ್ಲಿ ಕುಳಿತಿದ್ದರು. ಸಖಿಯರು, ಖಚರಿಯರು, ಅಂಬರಚರಿಯರು ಅಲ್ಲಿ ನೆರೆದಿದ್ದರು.

ಬಾಸಿಗವನ್ನು ಕಟ್ಟಿದ್ದ ರಾಜಕುಮಾರ ಮೆಟ್ಟಕ್ಕಿಯಲ್ಲಿ ನಿಲ್ಲಿಸಿದರು. ಜವನಿಕೆಯನ್ನು ಹಿಡಿದು ಕುಮಾರನಮುಂದುಗಡೆ ರಾಜಕುಮಾರಿಯರನ್ನು ನಿಲ್ಲಿಸಿದರು. ವಾದ್ಯಘೋಷ, ಬ್ರಾಹ್ಮಣರ

ಮಂತ್ರಘೋಷ ಚಪ್ಪರವನ್ನು ತುಂಬಿತು. ಕುಮಾರಿಯರು ಪುಷ್ಪಮಾಲೆಗಳನ್ನು ಹಿಡಿದಿದ್ದರು. ಶುಭ ಮೂಹರ್ತದಲ್ಲಿ ಜವನಿಕೆಯನ್ನು ತೆಗೆದರು. ವಂದಿಗಳು ಉಗಡಿಸಿದರು. ಮನ್ಮಥನಂತಿದ್ದ ಸನತ್ಕುಮಾರನಿಗೆ ರಾಜಕುಮಾರಿಯರು ಮಾಲೆಗಳನ್ನು ಹಾಕಿದರು. ಜೀರಿಗೆ ಬೆಲ್ಲವನ್ನು ಹಾಕಿದರು. ಬ್ರಾಹ್ಮಣರು ಮಂತ್ರಘೋಷ ಮಾಡುತ್ತಿರಲು ಚಂದ್ರವೇಗನು ಚಿನ್ನದ ಕಲಶದಿಂದ ಧಾರೆಯನ್ನೆರೆದನು. ಶಿಷ್ಟ ಗುರು ಬುಧರು ಹರಸಿದರು. ವಿಪ್ರಸಮೂಹದ ಮಂತ್ರಾಕ್ಷತೆಹಳನ್ನು ಹಾಕಿದರು. ಐರೆವೆಣ್ಣುಗಳು ಹೊಂದಳಿಗೆಯಾರತಿಯೆತ್ತಿದರು.

ಭಿಕ್ಷುಕರು ತೃಪಿಗೊಂಡರು. ಚಂದ್ರವೇಗನು ರಾಜರುಗಳನ್ನು ಗಂಧ ,ಅಕ್ಷತೆ ತಾಂಬೂಲಗಳಿಂದ ಸತ್ಕರಿಸಿದನು, ನಾಲ್ಕುನೆಯ ದಿನದಂದು ನಾಗಬಲಿ ನೆರವೇರಿತು. ಆನೆಯ ಮೇಲೆ ಸನತ್ಕುಮಾರನನ್ನು ಕುಳಿರಿಸಿ ಮೆರವಣಿಗೆ ಮಾಡಿದರು. ದೊರೆಗಳು ಚಂದ್ರವೇಗನಿಂದ ಬೀಳ್ಕೊಂಡು ತಮ್ಮ ಊರುಗಳಿಗೆ ಹೋದರು.

ಇಲ್ಲಿ ಬರುವ ಸನತ್ಕುಮಾರ ವಿವಾಹದ ಚಿತ್ರಣಕ್ಕೂ ಈಕಾಲದಲ್ಲಿ ನಡೆಯುವ ಮದುವೆಗಲ್ಲಿಗೂ ಇರುವ ಸಾಮ್ಯವನ್ನು ಗುರುತಿಸಿದಾಗ ಈಭಾಗದಲ್ಲಿ ಸಮಕಾಲೀನ ಜನ ಜೀವನ ಎಷ್ಟರ ಮಟ್ಟಿಗೆ ಕಾವ್ಯರೂಪವಾಗಿ ಬಂದಿದೆಯೆಂಬುದನ್ನು ಗಮನಿಸಬಹುದು.

ಸನತ್ಕುಮಾರ ಚರಿತೆಯ ಹದಿನಾಲ್ಕನೆಯ ಸಂಧಿಯಲ್ಲಿ ಬರುವ ಸುನಂದಾವಿವಾಹದ ಊಟದ ವರ್ಣನೆ ಆ ಕಾಲದ ಜನರ ಕ್ರಮವನ್ನು , ನಾಲಗೆಯ ರುಚಿಯನ್ನು, ಭೋಜನೆ ಪರಾಕ್ರಮವನ್ನು ಎತ್ತಿ ತೋರಿಸುತ್ತದೆ. ಈ ಮಾತು ಹೇಳಿದಾಗ ದಿನ ನಿತ್ಯ , ಜನಸಾಮಾನ್ಯರೆಲ್ಲ ಇಷ್ಟೊಂದು ವೈಭವೋಪೇತವಾಗಿ ಊಟ ಮಾಡುತ್ತಿದ್ದರೆಂದಲ್ಲ. ಹಬ್ಬ ಹರಿದಿನಗಳಲ್ಲಿ, ಮದುವೆ, ಮುಂಜಿ, ಶೋಭನಗಳಲ್ಲಿ ಇಂದಿಗೂ ಕೈಬಿಟ್ಟು ಖರ್ಚು ಮಾಡುವುದನ್ನು ಗಮನಿಸಿದಾಗ ಸಮೃದ್ದವಾಗಿದ್ದ ಆಕಾಲದಲ್ಲಿ ಈಬಗೆಯ ಊಟ ಅನಿರೀಕ್ಷಿತವೇನಲ್ಲ. ನಾವು ಗಮನಿಸಬೇಕಾದ

ಸಂಗತಿಯೆಂದರೆ ಬೊಮ್ಮರಸನು ತಾನು ನೋಡಿದ ಅಥವಾ ಮಾಡಿಸಿದ ಮದುವೆ, ಒಂಡ ಊಟ ಇವುಗಳ ಯಥಾವತ ಚಿತ್ರಣವನ್ನು ತನ್ನ ಕಾವ್ಯದಲ್ಲಿ ತಂದಿದಾನೆಯೆಂಬುದನ್ನು ಊಟದ ವರ್ಣನೆಯನ್ನು ನೋಡಿ–"ಜವ್ವನದ ವಿಲಾಸದ ಬೋನಗಿತ್ತಿಯರು ಸದ್ಯೋಘೃತವನಭೀಗರಿಸುರ್ತಿದರು. ಬ್ರಾಹ್ಮಣರು ಭೋಜನೆ ಮೊದಲಿನಾಪೋಶನದ ನೈತ್ತಿ ಮಾಡಿದ ಊಟ–

ಹೀರೆ, ಹಿತ್ತಲವರೆ, ಕುಂಬಲ, ಬಾಳೆ ,ಬದನೆ ಕಾರವೆಲ್ಲಿ, ಅವರೆಕಾಯಿಗಳ ತಾಳಿದವನ್ನು ಬಡಿಸಿದರು.

ಉದುರೆಗಾಯಿ, ತುಂಬುಗಾಯಿ ,ಬೆಣ್ಣೆಗಾಯಿಗಳನ್ನು ಸವಿದರು.

ನಿಂಬೆ, ನೆಲ್ಲಿ, ಹಿರುಳಿ, ಮಾವಿನಕಾಯಿ ಮತ್ತು ಮಾಗುಳಿ ಬೇರುಗಳ ಉಪ್ಪಿನ ಕಾಯಿಯ ರುಚಿ ನೋಡಿದರು.

ಮುಕ್ತಾಫಲವ ಬರಿಕೃಯಿಂದ ಸುರಿಯುವಂತಿರುವ ಅನ್ನ, ಕನಕವರ್ಣದ ಸೂಪ ಧಾರಾಕಾರವಾಗಿ ಸುರಿಯುವ ತುಪ್ಪದೊಡನೆ ಹಪ್ಪಳ ಮುರಿದು, ಉಪ್ಪಿನಕಾಯ ಚಪ್ಪರಿದು ಊಟ ಮಾಡಿದರು. ಅನಂತರ

ಸತಿಯರು ಸಜ್ಜಿಗೆಯ ಮಿಗೆ
ಪರಡಿಗಹ್ವಲೆ ಸೇವೆಗೆಯ ಪರಿ
ಪರಿಯ ಪರಮಾನ್ನಗಳನುದಿನ ಕಡುಬು ಹೂರಿಗೆಯ
ಕರಜಿ ಕಾ[ಯ್ಗಾ ] ರಿಗೆ ಸುಖಿಯ ಮೃದು
ತರದ ಚಕ್ಕುಲಿಯಾದಿಗಳ ಭೂ

ವರರು ದಣಿವಂದದಲಿ ಬಡಿಸಿದರಂಬುಜಾಕ್ಷಿರು. (೧೪-೧೭)

ಇಷ್ಟೆಲ್ಲವನೂ ತಿಂದು" ಜಂಬೂರಯೇಲಾ ಭರಿತ ಲವಣದಿ ಕರ್ಪೂರದಿ ಕರಿಬೇವಿನಿಂದೆಸೆವಧರೆಗೆ ನಮಸುಧೆಯೆನಿಪ ತಕ್ರವ ......... ಪೀರ್ದರಾನಂದಿಸುತ ದಣಿವಂತೆ ಊಟಮಾಡಿ ತೃಪ್ತಿಗೊಂಡು ಉತ್ತರಾಪುಶನವನ್ನು ತೆಗೆದುಕೊಂಡು ಕೈಕಾಲವನ್ನು ತೊಳೆದು ಚಿತ್ರಶಾಲೆಯಲ್ಲಿ ವೀಳೆಯವನ್ನು ಹಾಕಿಕೊಂಡರು."

ಈ ನಿದರ್ಶನಗಳನ್ನು ನೋಡಿದರೆ ಬೊಮ್ಮರಸನು ಸಮಕಾಲಿನ ಜೀವನದ ಅಸ್ತಿವಾರದ ಮೇಲೆ ಹೇಗೆ ತನ್ನ ಕಾವ್ಯಕಲ್ಪನೆಯನ್ನು ಹರಿಸಿದ್ದಾನೆಯೆಂಬುದು ತಿಳಿದು ಬರುತ್ತದೆ.

## ಜೈನ ಶಾಸ್ತ್ರಗಳ ಪ್ರಕಾರ ಸನತ್ಕುಮಾರ ಚರಿತೆಯ ಸ್ಥಾನ

ಜೈನ ಶಾಸ್ತ್ರಗಳ ಪ್ರಕಾರ ಸನತ್ಕುಮಾರ ಚರಿತೆಯ ಸ್ಥಾನ ಹೀಗಿದೆ. ದ್ವಾದ ಶಾಂಗ ವೇದರೂಪವಾದ ಜೈನಾಗಮಗಳನ್ನು ನಾಲ್ಕು ವಿಭಾಗ ಮಾಡಿದ್ದಾರೆ.

ಪ್ರಥಮಾನುಯೋಗ ಶಾಸ್ತ್ರ

ಕರಣಾನುಯೋಗ ಶಾಸ್ತ್ರ

ಚರಣಾನುಯೋಗ ಶಾಸ್ತ್ರ

ದ್ರವ್ಯಾನುಯೋಗ ಶಾಸ್ತ್ರ

ಈ ನಾಲ್ಕು ವೇದಗಳಲ್ಲಿ ಸಂಪುರ್ಣ ಶ್ರುತಜಾನವು ಅಡಗಿತ್ತದೆ.

ಪ್ರಥಮಾನುಯೋಗ ಶಾಸ್ತ್ರವೆಂದರೆ ೨೪ ತೀರ್ಥಂಕರರು, ೧೨ ಜನ ಚಕ್ರವರ್ತಿಗಳು, ೯ ಜನ ನಾರಾಯಣರು, ೯ ಜನ ಪ್ರತಿನಾರಾಯಣರು, ೯ ಜನ ಬಲಭದ್ರರು ಅಂದರೆ ಒಟ್ಟು ೬೩ ಜನ ಮಹಾಪುರುಷ(ತಿಷ ಷ್ಠಿ ಶಲಾಕಾಪುರುಷ) ರನ್ನು ಕುರಿತು ಬರೆದ ಕೃತಿಗಲನ್ನು ಒಳಹೊಂಡಿರುತ್ತದೆ. ನಾಲ್ಕು ಪುರುಷಾರ್ಥಗಳನ್ನು ಬೋಧಿಸುವ ಏಕ ಪುರುಷಾಶ್ರಯವಾದ ಕಥೆಯನ್ನು ಒಲಗೊಂಡಿರುತ್ತದೆ. ರತ್ನತ್ರಯ ಮತ್ತು ಸಮಾಧಿಧ್ಯಾನಗಳನ್ನು ಕುರಿತು ಪ್ರತಿಪಾದಿಸುತ್ತದೆ.

ಕರಣಾನುಯೊಗ ಶಾಸ್ತ್ರವು ಲೋಕಾಲೋಕ ವಿಬಾಗ ,ಆರು ಉತ್ಸರ್ಪಿಣೀ ಮತ್ತು ಆರು ಅವಸರ್ಪಿಣಿ ಕಾಲಗಲ ಪರುವರ್ತನೆ. ನಾರಕ ತಿರ್ಯಂಚ ಮನುಷ ದೆವಗತಿಗಳೆಂಬ ನಾಲ್ಕುಗತಿಗಳ ಶ್ವರೂಪವನ್ನು ಒಳಗೊಂಡಿರುತ್ತದೆ. ಚರಣಾನು ಯೋಗ ಶಾಸ್ತ್ರವು ಶ್ರಾವಕರು ಮತ್ತು ಯತಿಗಲ ಚಾರಿತ್ರದ ಪ್ರತಿಪಾದಿಸುತ್ತದೆ.

ದ್ರವ್ಯಾನುಯೋಗ ಶಾಸ್ತ್ರ ಜೀವಾದಿ ಪದಾರ್ಥಗಲ ಸ್ವರೂಪವನ್ನು ಭೋದಿಸುತ್ತದೆ. ಇದನ್ನು ಭಾವಶ್ರುತಯೆಂದು ಎರಡು ಭಾಗಗಳನ್ನು ಮಾಡುತ್ತಾರೆ. ಜಾನಾತಕವಾದ ಶಾಸ್ತ್ರಕ್ಕೆ ಭಾವಶ್ರುತವೆಂದೂ, ಶಬ್ದಾತ್ಮಕವಾದ ಶಾಸ್ತ್ರಕ್ಕೆ ದ್ರವ್ಯಾಶುತವೆಂದೂ ಹೆಸರು. ದೀಪವು ಸಕಲ ಪಧಾರ್ಥಗಳನ್ನು ಪ್ರಕಾಶ ಪಡಿಸುವಂತೆ ದ್ರವ್ಯಾನುಯೋಗ ಶಾಸ್ತ್ರವು ಜೀವಾಜೀವ ಪುಣ್ಯಪಾಪ ಬಂದವೋಕ್ಷಗಳ ಸ್ವರೂಪವನ್ನು ಮತ್ತು ಭಾವಶ್ರುತವೆಂಬ ಪ್ರಕಾಶವನ್ನು ಉಂಟುಮಾಡುತ್ತದೆ.

ಪ್ರಕೃತಗ್ರಂಥವಾದ ಸನತ್ಕುಮಾರ ಚರಿತೆಯು ಮೇಲೆ ಹೆಳಿದ ನಾಲ್ಕು ವಿಭಾಗಗಲಲ್ಲಿ ಮೊದಲನೆದಾದ ಪ್ರಥಮಾನುಯೋಗ ಶಾಸ್ತ್ರದಲ್ಲಿ ಅಲವಡುತ್ತದೆ. ಸನತ್ಕುಮಾರನು ಹದಿನೈದನೆಯ ತಿರ್ಥಂಕರನಾದ ಧರ್ಮತೀರ್ಥಂಕರನ ಕಾಲದಲ್ಲಿ ನಾಲ್ಕನೆಯ ಚಕಿಯಾಗಿ ಹುಟ್ಟುತ್ತಾನೆ. ತ್ರಿಷಷ್ಠಿ ಶಲಾಕಾಪುರುಷರಲ್ಲಿ ಸನತ್ಕಾಮಾರನು ಒಬ್ಬನಾದುದರಿಂದ ಇವನ ಚರಿತೆಯನ್ನು ಹೇಳುವ ಈ ಕೃತಿ

ಏಕಪುರುಷಾಶ್ರಯ ವಾದುದರಿಂದ ರತ್ನತ್ರಯ ಮತ್ತು ಸಮಾಧಿ ದ್ಯಾನಗಳನ್ನು ಪ್ರತಿಪಾದಿಸುವುದರಿಂದ ಪ್ರಥಮಾನುಯೋಗ ಶಾಸ್ತ್ರದಲ್ಲಿ ಅಳವಡುತ್ತದೆ.

---

1 ಪ್ರಥಮಾನುಯೋಗಮರ್ಥಾಖ್ಯಾನಂ ಚರಿತಂ ಪುರಾನಮಪಿ ಪುಣ್ಯಂ
ಬೋಧಿ ಸಮಾಧಿ ನಿಧಾನಂ ಬೋಧತಿ ಬೋಧಃ ಸಮಿಚೀನಃ ॥

2 ಲೊಕಾಲೋಕ ವಿಭಕೇರ್ಯುಗ ಪರಿವೃತ್ತೇಶ್ಚತುರ್ಗತೀನಾಂ ಚ
ಆದರ್ಶಮಿವ ತಥಾಮತಿರವು ತಿ ಕರಾಣಾನುಯೋಗಂ ಚ ॥

3 ಗೃಹಮೇದ್ಯ ನಗರಾಣಾಂ ಚಾರಿತ್ರೋತ್ಪತ್ತಿವೃದ್ಧಿ ರಕ್ಷಾಂಗಂ
ಚರಣಾನುಯೋಗ ಸಮಯಂ ಸಮ್ಯಗ್ಜ್ಞಾನಂ ವಿಜಾನಾತಿ ॥

4 ಜೀವಾಜೀವ ಸುತತ್ತ್ವೇ ಪುಣ್ಯಾಪುಣ್ಯೇ ಚ ಬಂಧಮೋಕ್ಷೌಚ
ದ್ರವ್ಯಾನುಯೋಗದೀಪಃ ಶ್ರುತವಿದ್ಯಾಲೋಕಮಾತನುತೇ ॥

–ಸಮಂತಭದ್ರರ ರತ್ನಕರಂಡಕ

## ಸನತ್ಕುಮಾರ ಚರಿತೆಯ ಗುರಿ

ಸನತ್ಕುಮಾರ ಚರಿತೆಯಂಥ ಕೃತಿಗಳಲ್ಲಿ ನಾವು ಕಾಣುವುದು ಸಾರ್ವಕಾಲಿಕ ಸತ್ಯದ ಪ್ರತಿಪಾದನೆ: ಈ ಬಗೆಯ ಕೃತಿಗಳಲ್ಲಿ ಸಮಕಾಲೀನ ವೇದಾಂತ, ಜೀವನ ತತ್ತ್ವ, ತಾತ್ಕಾಲಿಕ ಜೀವನಾದರ್ಶಗಳನ್ನು ನಿರೀಕ್ಷಿಸುವಂತಿಲ್ಲ. ಅಂತೆಯೇ ನಾವು ಈ ಕೃತಿಯಲ್ಲಿ ಗಮನಿಸಬಹುದಾದ

ಅಂಶಗಳು ಎರಡು– ಒಂದು ಆಶೌಚ ಭಾವನೆ ಮತ್ತೊಂದು ಜನ್ಮ ಜನ್ಮಾಂತರದಲ್ಲಿ ಮುಂದುವರಿಯುವ ದ್ವೇಷ ಮತ್ತು ಅದರ ನಿವಾರಣೆ.

ಆಶೌಚ ಭಾವನೆಯನ್ನು ಪ್ರತಿಪಾದಿಸಲು ಈ ಕಥೆ ಉತ್ತಮ ನಿದರ್ಶನ. ಸನತ್ಕುಮಾರ ಅತ್ಯಂತ ಸುಂದರವಾದ ಶರೀರವನ್ನು ಹೊಂದಿದವನು. ಅವನ ರೂಪಾತಿಶಯದ ಬಗ್ಗೆ ದೇವಸಭೆಯಲ್ಲೂ ಚರ್ಚೆನಡೆಯಿತು. ಅದನ್ನು ಪರಿಕ್ಷೀಸಲು ಇಬ್ಬರು ದೇವತೆಗಳು ಸನತ್ಕುಮಾರನ ಬಳಿಗೆ ಬಂದರು. ಆ ಕ್ಷಣದಿಂದ ನಿಷ್ಕಲ್ಮಷವಾಗಿದ್ದ ಸನತ್ಕುಮಾರನ ಶರೀರದೊಳಕ್ಕೆ 'ನಾನು ರೂಪವಂತ" ಎಂಬ ಗರ್ವ ಒಳ ಹೊಕ್ಕಿತು. ಆ ಕರ್ಮ ಅವನ ಆತ್ಮವನ್ನು ಪ್ರವೇಶಿಸಿತು. ಏಳನೂರು ರೋಗಗಳು ಅವನಲ್ಲಿ ತಲೆ ಹಾಕಿದುವು ಅದೃಷ್ಟವಶಾತ ಸನತ್ಕುಮಾರನು ಆರೋಗಗಳನ್ನೆಲ್ಲ ಸಹನೆಯಿಂದ ಸಹಿಸಿಕೊಂಡನು. ಅವನ ಅಹಂಕಾರ ನಿವೃತ್ತಿಯಾಯಿತು. ಮೊದಲು ಸಾಧುವಾಗಿ ಕಡೆಯಲ್ಲಿ ಸಿದ್ಧನಾದನು.

ಇದರಿಂದ, ನಮ್ಮ ಶರೀರದ ಬಗ್ಗೆ ನಾವು ನಿರಹಂಕಾರಿಗಳಾಗಿರುವುದು, ನಮ್ಮ ಶರೀರದ ಹೇಸಿಕೆಯಿಂದ ತುಂಬಿ ಶರೀರಕ್ಕೆ ಆತ್ಮವನ್ನು ಕಲುಷಿತಗೊಳಿಸುವ ಅಭ್ಯಾಸವಿದೆಯೆಂಬುದು, ಇವನ್ನು ಮರೆತರೆ ನಮ್ಮ ಮೇಲೆ ದೊಡ್ಡ ಕೇಡು ಎರಗುವುದು ಎಂಬ ಅಂಶಗಳು ತಿಳಿದುಬರುತ್ತವೆ.

ಜೈನಧರ್ಮ ಸಾಮಾನ್ಯವಾಗಿ ಪ್ರತಿಪಾದಿಸುವ ದ್ವೇಷ ಮತ್ತು ಪ್ರೀತಿಗಳು ಜನ್ಮ ಜನಾಂತರದಲ್ಲೂ ಮುಂದುವರಿಯುತ್ತವೆಯೆಂಬುದು ಮತ್ತೊಂದು ಸಂಗತಿ. ಸನತ್ಕುಮಾರ ಮತ್ತು ಅಸಿತಾಕ್ಷರ ಜೀವಗಳು ಇದಕ್ಕೆ ಸಾಕ್ಷಿ. ನಾಗಚಂದ್ರ ಮತ್ತು ಪ್ರಮುಖರ ಭವದಲ್ಲಿ ಮೊಳೆತ ದ್ವೇಷ ಜಿನವರ್ಮ–ಕನಕದಂತಿಯರಲ್ಲಿ ಬೆಳೆದು ಸನತ್ಕುಮಾರ ಮತ್ತು ಅಸಿತಾಕ್ಷರಾಗಿ ಎದುರಿಸಿಮುಕಾಯವಾಗುತ್ತದೆ. ಅಲ್ಲಿಂದ ಮುಂದೆ ಸನತ್ಕುಮಾರ ರಾಗ ದ್ವೇಷಗಳನ್ನು ಅಳಿದು ಮುಕ್ತಾತ್ಮನಾಗಿ ಮೋಕ್ಷವನ್ನು ಪಡೆಯುತ್ತನೆ.

ಹೀಗೆ ಈ ಕೃತಿ  ಸಾರ್ವಕಾಲಿಕ ಸತ್ಯವಾದ ಆಶೌಚ ಭಾವನೆಯನ್ನು, ರಾಗ ದ್ವೇಷಗಳ ನಿರ್ಮೂಲವನ್ನು ಪ್ರತಿಪಾದಿಸುತ್ತದೆ. ಪ್ರತಿಫಲವಿಲಾದ  ಪ್ರೀತಿ, ಪ್ರತಿಫಲ ವಿಲ್ಲದ ದ್ವೇಷ ಇವುಗಳಿಂದ ಈ ಆತ ಮುಕವಾಗಿರಬೇಕು ಎಂಬ ಸಾರ್ವಕಾಲ್ಲಿಕ ಸತ್ಯವನ್ನು ಈ ಕೃತಿ ಪ್ರತಿಪಾದಿಸುತ್ತದೆ.

ಕೃತಿರಚನೆಯ ಮೊದಲಲ್ಲಿ ಸ್ವಚರಿತವನ್ನು ಹೇಳಿಕೊಳ್ಳುವಾಗ ಬೊಮ್ಮರಸ ತನ್ನ ಕಾವ್ಯ 'ಸೊಗಸುವಾತಿನ ಸೋನೆ' 'ಸದ್ಭಾವನೆಗಳ ಸರಿ' 'ನವರಸಗಳೊಸರುವ ಸಾರ' 'ಭೂಮಿಯ ಪೊಸತೆನಲು ರಂಜಿಪುದು' ಎಂಬ ಹೆಗ್ಗಳಿಕೆಯ ಮಾತುಗಳನ್ನು ಹೇಳಿಕೊಂಡಿದ್ದಾನೆ. ಆದರೆ ವಡ್ಡಾರಾಧನೆಯನ್ನು ತನ್ನ ಕೃತಿಯ ಆಕರವನ್ನಾಗಿ ಮಾಡಿಕೊಂಡ ಬೊಮ್ಮರಸನಿಗೆ ವಸ್ತುವಿನ್ಯಾಸದಲ್ಲಿ ಗಮನಾರ್ಹ ತೊಂದರೆಯೇನೂ ಉಂಟಾಗಲಿಲ್ಲ.  ಭಾಷೆ, ಶೈಲಿ, ಅಲಂಕಾರಗಳಲ್ಲಿ ಹೊಸತನವಾಗಲಿ, ವ್ಯಕಿ ವೈಶಿಷ್ಟ ವಾಗಲಿ ಇಲ್ಲವಾದರೂ ಕೃತಿ ಸಾಧಾರಣಮಟ್ಟದಿಂದ ಕೆಳಗಿಳಿದಿಲ್ಲ. ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶ್ರೀ ತ.ಸು. ಶಾಮರಾಯರು ಹೇಳುವ 'ಬೊಮರಸನು ಮಹಾಕವಿಯಲ್ಲ ಒಳೆಯ ಕವಿ' ಎನ್ನುವ ಮಾತನ್ನು ಒಪ್ಪಬಹುದು. ಈ ಬಗೆಯ ಕೃತಿಯಿಂದ ಜನತೆ ಪ್ರಯೋಜನವನ್ನು ಪಡೆದಿದೆ, ನಿರ್ದುಷ್ಟ ಸರಳ ಸುಲಭ ಶೈಲಿಯಿಂದ ಈ ಕೃತಿ ಆಹಾದಕಾರಿಯಾಗಿದೆ. ಕೃತಿ ಮೊದಲಿಂದ ಕಡೆಯವರೆಗೆ ಓದಿಸಿಕೊಂಡು ಹೋಗುತ್ತದೆ. ಕವಿಯ ಮುಖ್ಯ ಗಮನ ತತ್ವ ಪ್ರತಿಪಾದನೆ. ಜೈನ ಧರ್ಮವನ್ನು ಜನಸಾಮಾನ್ಯರಿಗೆ ಪರಿಚಯ ಮಾಡಿಕೊಡುವಲ್ಲಿ ಈ ಕವಿಯು ಕೃತ ಕೃತ್ಯನಾಗಿರುವುದನ್ನು ನಾವು ಕಾಣಬಹುದು.

## ಹಸ್ತಪ್ರತಿಗಲ ವಿವಾರ

ಸನತ್ಕುಮಾರ ಷಟ್ಪದಿಯನ್ನು ಐದು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದೆ. ಆ ಪ್ರತಿಗಳ ವಿವರ ಈ ರೀತಿ ಇದೆ.

ಅ–ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥ ಭಂಡಾರದ ಹಸ್ತಪ್ರತಿಯ ಕ್ರಮ ಸಂಖ್ಯೆ ಕೆ. **753.** ಓಲೆಯ ಉದ್ದ **13"** ಅಗಲ **1 $^{1}/_{2}$"** ಪ್ರತಿಓಲೆಯಲ್ಲಿ ಸರಾಸರಿ **8** ಪಂಕಿ. ಪ್ರತಿಪಂಕ್ತಿಯಲ್ಲಿ ಸರಾಸರಿ **60** ಅಕ್ಷರಗಳ್ಲಿವೆ .ಈ ಕಟ್ಟಿನಲ್ಲಿಸನತ್ಕುಮಾರ ಷಟ್ಪದಿ **1-69** ಓಲೆಗಳಲಿ ಜೀವಂಧರ ಚರಿತೆ **1-77** ಓಲೆಗಳಲ್ಲಿದೆ. ಎರಡು ಕೃತಿಗಳೂ ಸಮಗ್ರ, ಅಕ್ಷರ ಮುದಾಗಿದ್ದು ಕಟ್ಟಿನ ಸ್ಥಿತಿ ಉತ್ತಮ .ಶಕರಟರೇಫದ ಬಳಕೆಯಿಲ್ಲ . ಹೆಗ್ಗಡದೇವನ ಕೋಟೆಯ ಮಳಲಿ ಪ್ರಾಂತಕ್ಕೆ ಸೇರಿದ ಈ ಪ್ರತಿಯ ಕಾಲ **1850.**ಲ್ಲಿ ಲಿಪಿಕಾರ ನಾಗರಾಜಯ್ಯ. "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದಾಃ **1772** ನೆ ಸಾಧಾರಣನಾಮ ಸಂವತ್ಸರದ ಕಾರ್ತಿಕ ಶುದ್ಧ **1**ಕುಜವಾರದಲ್ಲು ಮಳಲಿ ಶಾಂತಯ್ಯರ ಕುಮಾರರಾದ ಜಿನಚಂದ್ರಯ್ಯನವರಿಗೆ ಮಹಿಶೂರ ದೇವಸ್ಥಾನದ ರಾತ್ರಿ ಅರ್ಚಕ ನಾಗರಾಜೈಯನು ಜೀವಂಧರನ ಷ್ಟಟದಿಯನ್ನು ಬರದು ಕೊಟ್ಟದ್ದಕ್ಕೆ ಜಯಮಂಗಳ ಮಹಾ ಶ್ರೀ ಶ್ರೀಶ್ರೀ" ಎಂಬ ಬರೆಹವಿದೆ. ಸನತ್ಕುಮಾರ ಷಟ್ಪದಿ ಮತ್ತು ಜೀವಂಧರ ಷಟ್ಪದಿಯ ಬರೆಹ ಬಬ್ಬನೇ ಲಿಪಿಕಾರನ ದಾಗಿದೆ. ಇನೊಂದು ಓಲೆಯಲ್ಲಿ 'ಕಿತ್ತೂರು ಬೊಮ್ಮರಸಯ್ಯನಾದ ನಾನು ತೆಗೆದು ಕೊಂಡೆನು ಕ್ರಯಕ್ಕೆ' ಎನ್ನುವ ಬರೆಹವೂ ಇದೆ. ಈ ಪ್ರತಿಯಿಂದಲೇ ಮುದ್ರಣ ಪ್ರತಿಯನ್ನು ತಯಾರಿಸಿದೆ.

ಕ– ಇದು ಕಾಗಗದ ಪ್ರತಿ. ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥ ಭಂಡಾರದ ಹಸ್ತ ಪ್ರತಿಯ ಕ್ರಮಸಂಖ್ಯೆಕೆ. ಬಿ **66.** ಪತ್ರದ ಉದ **6''**ಅಗಲ **71/2''.** ಪ್ರತಿ ಪುಟದಲ್ಲಿ ಸರಾಸರಿ **11** ಪಂಕ್ತಿ . ಪ್ರತಿ ಪಂಕ್ತಿಯಲ್ಲಿ ಸರಾಸರಿ **25** ಅಕ್ಷರಗಳ್ಲಿವೆ. ಪತ್ರಸಖ್ಯೆ **173.** ಎರಡು ಕಡೆಯೂ ಬರೆಹವಿದೆ.

ಈಪ್ರತಿಯ ವಿವರಗಳು ತಿಳಿಯುವುದಿಲ್ಲ. ಬಹುಶಃ ಬಿ .ಲೂಯಿ ರೆಸರವರ ನೇತೃತ್ವದಲ್ಲಿ ಪ್ರತಿ ಮಾಡಲ್ಪಟ್ಟಿರಬೇಕು. ಅಕ್ಷರಗಳು ಮುದ್ದಗೆವೆ. ಪುಸ್ತಕದ ಸ್ಥಿತಿ ಉತ್ತಮ.

ಖ–ಇದು ಕಾಗಗದ ಪ್ರತಿ ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥ ಭಂಡಾರದ ಹಸ್ತಪ್ರತಿಯ ಕ್ರಮಸಂಖ್ಯೆ ಕೆ.ಎ **479.**ಈ ಸಂಸ್ಥ ಗೆ ಮದರಾಸು ಪ್ರಾಚ್ಯ ಹಸ್ತಪ್ರತಿಗಳ ಕೋಶಗಾರದಿಂದ ಇದು ಬಂದಿದೆ. ಪತ್ರದ ಉದ್ದ **91/2''** ಅಗಲ **10 3/4''.**ಪ್ರತಿ ಪುಟದಲ್ಲಿ ಸರಾಸರಿ **30** ಪಂಕ್ತಿ ಪ್ರತಿ ಪಂಕ್ತಿಯಲ್ಲಿ ಸರಾಸರಿ **18** ಅಕ್ಷರಗಳಿವೆ. ಪುಟ ಸಂಖ್ಯೆ **68** ರಿಂದ**225. 8** ನೆಯ ಸಂದಿ **9**ನೆಯಪದ್ಯಿಂದ ಮುಂದೆಇದೆ ಈಪುಸ್ತಕದ **1-67** ಪುಟಗಳು ಸಂಧಿ **1** ರಿಂದ **8** ನೆಯ ಪದ್ಯದವರೆಗೆ ಇರುವವೊದಲ ಭಾಗ ಕರ್ನಾಟಕದ ವಿಶ್ವವಿದ್ಯಾಲಯದಲ್ಲಿದೆ, ಕಡೆಯಲ್ಲಿ "ಸ್ವಸಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ **1590** ನೆಯ ಕೀಲದ ಸಂವತ್ಸರದ ಮಾಘ ಶು . **11** ದಿವಸದಲ್ಲಿ ಹದಿನಾಡ ಸೀಮೆಯ ಯಳವಂದೂರ ಸ್ಥಳಕ್ಕೆ ಪೂರ್ವಿಕ ರಾದ ಕಾಸ್ಯಪಗೋತ್ರದ **x x x** ತಣಪಂಡಿತರ ಕುಮಾರರಾದ ಸೂರಿ ಪಂಡಿತರ ಕಿರಿಯಮಗ ಬೊಮ್ಮರಸ ಪಂಡಿತನು ನಮ್ಮ ಶಾರದಾ ಭಂಡಾರಕ್ಕೆ ಪೊಸುಕವಾಗ ಬೇಕುಯೆಂದು ಬರೆದೆರಡು ಸನತ್ಕುಮಾರ ಕೃತಿಯ ಪೊಸ್ತಕಕ್ಕೆ ಚಂದ್ರತಾರಾರ್ಕರುಳ ಪರಿಯುಂತರ ಭದ್ರಂ ಭೂಯಾತ್" ಎಂಬ ಉಲ್ಲೇಖವಿದೆ.

ಗ– ಇದು ಕಾಗಗದ ಪ್ರತಿ. ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಭಂಡಾರದ ಹಸ್ತ ಪ್ರತಿಯ ಕ್ರಮಸಂಖ್ಯೆ ಕೆ.ಎ. **213.** ಪತ್ರದ ಉದ್ದ **13'** ಅಗಲ **8.2''** .ಪ್ರತಿ ಪತ್ರದಲ್ಲಿ ಸರಾಸರಿ **32** ಪಂಕ್ತಿಯಿದ್ದು ಪ್ರತಿ ಪಂಕ್ತಿಯಲ್ಲಿ ಸರಾಸರಿ **22** ಅಕ್ಷರಗಳಿವೆ. ಬಿ. ಲೂಯಿ ರೈಸ್ ಅವರ ಕಾಲದಲ್ಲಿ ಪ್ರತಿ ಮಾಡಲ್ಪಟ್ಟಿದ್ದು **``Copied by narasimha sastri & delivered sep 1895''** ಎಂಬ ಬರಹವಿದೆ. ಪ್ರತಿ ಸ್ವಲ ಮಟ್ಟಿಗೆ ಅಶುದ್ಧ.

ಘ– ಅರಮನೆಯ ಸರಸ್ವತೀ ಭಂಡಾರದ **14** ನೆಯ ನಂಬರಿನ ಓಲೆಯ ಪ್ರತಿ. ಉದ್ದ **13 ½ "** ಅಗಲ **1 1 / 2"** ಪ್ರತಿ ಓಲೆಯಲ್ಲಿ ಸರಾಸರಿ **8**ಪಂಕ್ತಿಯಿದ್ದು ಪ್ರತಿ ಪಂಕ್ತಿಯಲ್ಲಿ ಸರಾಸರಿ **60** ಅಕ್ಷರಗಳಿವೆ. ಈ ಕಟ್ಟಿನಲ್ಲಿ ಸನತ್ಕುಮಾರ ಚರಿತೆ ಮತ್ತು ಜೀವಂಧರ ಷಟ್ಪದಿಗಳಿವೆ. ಶಕಟರೇಫದ ಬಳಕೆಯಿಲ್ಲ.

ಜಿ .ಜಿ

ಮಂಜುನಾಥನ